# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.
ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ
60,000 Plus readers
94486 33038
NEWSPAPER AD- THE BEST ADVERTISING PLATFORM TO BOOST YOUR BUSINESS
hampitimes@gmail.com
Valmiki Circle, Hosapete-583201



ಸಂಪುಟ:01 • ಸಂಚಿಕೆ:306 • ನೋಂದಣಿ ನಂ.:KARKAN27911 • ವಿಜಯನಗರ • 05.05.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:306 • Reg.No:KARKAN27911 • VIJAYANAGARA • 05.05.2024 • Sunday • Page:04 • Rs:2



NATIONAL PU COLLEGE
HARIHAR ROAD, HOSAPETE-583203, Phone: 08394-230445
Congratulations to all Who made us proud
SCHOLARSHIP UPTO 30,000 /-
FOR MERITORIOUS STUDENTS
SCIENCE Distinctions:60 - FirstClass:61
Consistent & quality results since 16 years in both Science & Commerce
THE ONLY COLLEGE IN HOSAPETE TO SECURE MORE NUMBER OF DISTINCTIONS
The trustworthy team of pcmb lecturers led by R. Shashidhar has been effectively managing the academic progress of National PU College since June 2009.
Bus facility from Hospet city, M M Halli, Huligi & Munirabad, HAMPI, KAMALAPURA
M: 94481 73436, 94499 80200
MEDHA S R V 585/600- 97.50%
CHINMAYEE B L 583/600- 97.20%
CHINMAYI SALMATH 581/600- 96.80%



ಮಕ್ಕಳ ಜ್ಞಾನ ವಿಕಾಸಕ್ಕೆ ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ


# ಮತದಾನದ ಶಾಹಿ ನಮ್ಮ ಹೆಮ್ಮೆ ಬನ್ನಿ ನಿಮ್ಮ ಹಕ್ಕು ಚಲಾಯಿಸಿ

## ವಿಜಯನಗರ ಜಿಲ್ಲಾ ಪಂಚಾಯಿತಿ ಸಿಇಒ ಸದಾಶಿವ ಪ್ರಭು ಮನವಿ







**ಹಂಪಿ ಟೈಮ್ಸ್ ಹೊಸಪೇಟೆ**

ಮೇ 7ರಂದು ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ವಿಜಯನಗರ ಜಿಲ್ಲೆಯ ಸಮಸ್ತ ಪ್ರಜ್ಞಾವಂತ ಮತದಾರರು ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗೆ ಆಗಮಿಸಿ ಮತದಾನ ಮಾಡಬೇಕು ಎಂದು ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ ಕೋರಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪ್ರತಿ ವಿಧಾನಸಭಾ ಕ್ಷೇತ್ರಕೆಕ ಸಖಿ ಮತಗಟ್ಟೆಗಳ ಸಂಖ್ಯೆ 5 ರಂತೆ ಒಟ್ಟು 25 ಸಿದ್ಧಗೊಳಿಸಲಾಗಿದೆ. ವಿಧಾನಸಭಾ ಕ್ಷೇತ್ರಕ್ಕೊಂದರಂತೆ ವಿಶೇಷ ಚೇತನರಿಗೆ, ಯುವ ಮತದಾರರರಿಗೆ, ಮಾದರಿ ಮತಗಟ್ಟೆ, ಧ್ಯೇಯ ಆಧಾರಿತ ಮತ್ತು ಸಾಂಪ್ರಾದಾಯಿಕ ಮತಗಟ್ಟೆಗಳು ಸೇರಿದಂತೆ ಒಟ್ಟು 50 ವಿಶೇಷ ಮತಗಟ್ಟೆಗಳನ್ನು ಸಿದ್ಧಗೊಳಿಸಲಾಗಿದೆ. ಈ 50 ಮತಗಟ್ಟೆಗಳಲ್ಲಿ ಮತದಾನ ಮಾಡುವ ಮೊದಲ 100 ಜನರಿಗೆ ಸಸಿ ವಿತರಿಸಲಾಗುವುದು. ಗುಳೇ ಹೋದವರ ಪೈಕಿ ಅನೇಕರು ಮರಳಿ ಬಂದು ಮತದಾನ ಮಾಡಲಿದ್ದಾರೆ. ಮತದಾನ ಬೆಳಿಗ್ಗ 7 ರಿಂದ ಸಂಜೆ 6ವರೆಗೆ ನಡೆಯಲಿದ್ದು, ಮತದಾನ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವ ಕಾರ್ಯ ನಡೆದಿದೆ ಎಂದರು.

ಮತದಾನದ ಪ್ರಮಾಣದಲ್ಲಿ ವಿಜಯನಗರ ಜಿಲ್ಲೆಯು ಉತ್ತಮ ಸ್ಥಾನ ಕಾಯ್ದುಕೊಳ್ಳುವ ಹಾಗೆ ವಿಜಯನಗರ ಜಿಲ್ಲೆಯಾದ್ಯಂತ ಗಮನಾರ್ಹ ರೀತಿಯಲ್ಲಿ ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ. ವಿಜಯನಗರ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಜಿಲ್ಲಾಡಳಿತ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಜಿಲ್ಲಾ ಪಂಚಾಯತ್‌ನಿಂದ ನಾನಾ ರೀತಿಯ ಕಾರ್ಯಕ್ರಮಗಳನ್ನು ನಡೆಸಿ ಮತದಾನದ ಕುರಿತು ವಿಶೇಷ ಜಾಗೃತಿ ಮೂಡಿಸಲಾಗಿದೆ ಎಂದು ತಿಳಿಸಿದರು.

ವಿಜಯನಗರ ಜಿಲ್ಲೆಯ ಪ್ರಸಿದ್ಧ ಹಂಪಿ ವಿರೂಪಾಕ್ಷೇಶ್ವರ ಜಾತ್ರೆ, ಮೈಲಾರ ಜಾತ್ರೆ, ಕುರುವತ್ತಿ ಜಾತ್ರೆ ಹಾಗೂ ಹರಪನಹಳ್ಳಿ ತಾಲೂಕಿನ ಕೂಲಹಳ್ಳಿ ಜಾತ್ರೆ ಸೇರಿದಂತೆ ಇನ್ನಿತರ ಜಾತ್ರೆಗಳ ಸ್ಥಳದಲ್ಲಿ ಸೇರಿದ್ದ ಲಕ್ಷಾಂತರ ಜನಸಮೂಹದಲ್ಲಿ ಧ್ವನಿ ವರ್ಧಕ ಬಳಸಿ ಮತದಾನ ಜಾಗೃತಿ ಮೂಡಿಸಲಾಗಿದೆ. .

ವಿಶೇಷವಾಗಿ ಕೆಎಸ್‌ಆರ್‌ಟಿಸಿ ಪ್ರಯಾಣಿಕರ ಬಸ್ ಟಿಕೇಟ್, ಜೆಸ್ಕಾಂ ಕರೆಂಟ್ ಬಿಲ್, ಕೆಎಂಎಫ್ ಹಾಲಿನ ಪ್ಯಾಕೇಟಗಳಲ್ಲಿ, ಆರೋಗ್ಯ ಇಲಾಖೆಯ ಆರೋಗ್ಯ ಚೀಟಿನಲ್ಲಿ ಮತದಾನ ಜಾಗೃತಿಯ ವಿಷಯ ಅಳವಡಿಸಿ ಅರಿವು ಮೂಡಿಸಲಾಗಿದೆ. ನರೇಗಾ ಕಾಮಗಾರಿಗಳ ಸ್ಥಳದಲ್ಲಿ ಸಹ ಪ್ರತಿ ದಿನ ಕೂಲಿ ಕಾರ್ಮಿಕರಿಂದ ಮತದಾನ ಜಾಗೃತಿ ಅಭಿಯಾನ ನಡೆಸಲಾಗಿದೆ. ಜೊತೆಗೆ ಪ್ರತಿಜ್ಞಾ ವಿಧಿ ಬೋಧನೆ, 1950 ಚುನಾವಣಾ ಸಹಾಯವಾಣಿಯ ಬಗ್ಗೆ ಸಹ ತಿಳಿಸಿ ಮತ್ತು ಸ್ವಸಹಾಯ ಸಂಘದ ಮಹಿಳಾ ಸದಸ್ಯರಿಂದ ರಂಗೋಲಿ ಮತ್ತು ಮೆಹಂದಿ ಸ್ಪರ್ಧೆ ನಡೆಸಿ ಮತದಾನ ಕುರಿತು ಜಾಗೃತಿ ಮೂಡಿಸಲಾಗಿದೆ.

ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆಯ ಘನ ತ್ಯಾಜ್ಯ ವಿಲೇವಾರಿ ವಾಹನಗಳಲ್ಲಿ ಮತದಾನದ ಕುರಿತು ಧ್ವನಿ ಸುರುಳಿಗಳ ಮೂಲಕ ಜಾಗೃತಿ ಮೂಡಿಸಲಾಗಿದೆ. ಬಸ್ ನಿಲ್ದಾಣಗಳಲ್ಲಿ ಮತದಾನ ಜಾಗೃತಿಯ ಜಿಂಗಲ್ಸ್ ಬಿತ್ತರಿಸಲಾಗಿದೆ.

2019ರ ಸಾರ್ವತ್ರಿಕ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿರುವ ಮತಗಟ್ಟೆ ವ್ಯಾಪ್ತಿಯಲ್ಲಿ ಬೀದಿ ನಾಟಕ ಆಯೋಜಿಸಲಾಗಿದೆ. ಆಯುಷ ಇಲಾಖೆಯ ಎಲ್ಲಾ ಆಯುಷ್ ಕೇಂದ್ರಗಳಲ್ಲಿ, ಲೀಡ್ ಬ್ಯಾಂಕಿನಿಂದ ವಿವಿಧ ಬ್ಯಾಂಕ್ ಶಾಖೆಗಳಲ್ಲಿ ಮತ್ತು ಅಂಚೆ ಇಲಾಖೆಯಿಂದ ಸಹ ಮತದಾನ ಜಾಗೃತಿ ನಡೆಸಲಾಗಿದೆ.

ಸಾಮಾಜಿಕ ಅರಣ್ಯ ಇಲಾಖೆಯಿಂದ ನರ್ಸರಿಗಳಲ್ಲಿನ ಕಾರ್ಮಿಕರಿಗೆ, ಸಹಕಾರ ಇಲಾಖೆಯಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರಿಗೆ, ಕಾರ್ಮಿಕ ಇಲಾಖೆಯಿಂದ ಕಾರ್ಖಾನೆಗಳಲ್ಲಿನ ಕಾರ್ಮಿಕರಿಗೆ, ಶೋರೂಮ್ ಸಿಬ್ಬಂದಿಗೆ, ಬಿಎಂಡಬ್ಲ್ಯೂ, ಎಸ್‌ಎಲ್‌ಆರ್ ಮೆಟಾಲಿಕ್ಸ್, ಆರ್‌ಬಿಎಸ್‌ಎಸ್‌ಎನ್ ಮೈನಿಂಗದಲ್ಲಿನ ಕಾರ್ಮಿಕರಿಗೆ ಸಹ ಮತದಾನ ಕುರಿತು ಜಾಗೃತಿ ಮೂಡಿಸಲಾಗಿದೆ ಎಂದು ಸಿಇಓ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್‌ನ ಯೋಜನಾ ಅಂದಾಜು ಮೌಲ್ಯಮಾಪನಾಧಿಕಾರಿ ಪತ್ರಿಬಸಪ್ಪ ಎನ್.ಕೆ., ಅಧೀಕ್ಷಕರಾದ ಲೋಕೇಶ್ ಬಾಬು ಸೇರಿದಂತೆ ಇತರರು ಇದ್ದರು.

## ಯುವ ಮತದಾರರ ಧ್ವನಿ

### ಮತದಾನ ಭಾರತೀಯರ ಭವಿಷ್ಯ



ಮಾನವ ಮಾಡಬಹುದಾದ ಶ್ರೇಷ್ಠದಾನಗಳೆಂದರೆ ಒಂದು ರಕ್ತದಾನ ಇನ್ನೊಂದು ಮತದಾನ, ರಕ್ತದಾನ ದಿಂದ ಒಂದು ಜೀವ ರಕ್ಷಿಸಿದರೆ ಮತದಾನ ದಿಂದ ದೇಶದ ಸಾರ್ವಭೌಮತ್ವವನ್ನು, ಏಕತೆಯನ್ನು, 130 ಕೋಟಿ ಭಾರತೀಯರ ಭವಿಷ್ಯವನ್ನು ರಕ್ಷಿಸಬಹುದು, ಉತ್ತಮ ಆಡಳಿತಗಾರನನ್ನು ಆಯ್ಕೆ ಮಾಡುವುದು ನಮ್ಮ ಹೊಣೆಗಾರಿಕೆಯಾಗಿದೆ ಅದಕ್ಕಾಗಿ ಮೇ 7 ರಂದು ನಾನು ಮತದಾನ ಮಾಡಲಿದ್ದೇನೆ ನೀವು ತಪ್ಪದೇ ನಿಮ್ಮ ಹಕ್ಕನ್ನು ಚಲಾಯಿಸಿ ದಯಮಾಡಿ ಮತದಾನ ಮಾಡಿ.

– ಎಂ.ಮನೋಜ್ ರಾವ್
ಬಿ.ಇ. ವಿದ್ಯಾರ್ಥಿ, ಹೊಸಪೇಟೆ.

**ಯುವ ಮತದಾರರು ಮತದಾನದ ಅಭಿಪ್ರಾಯಗಳನ್ನು ಕಳಿಸಿ**
**94486 33038**
**Email: hampitimes@gmail.com**

# ಮೇ 10ಕ್ಕೆ ಬಸವೇಶ್ವರ ಜಯಂತಿ ಸರ್ವಧರ್ಮ ಸಾಮೂಹಿಕ ವಿವಾಹ

**ಹಂಪಿ ಟೈಮ್ಸ್ ಹೊಸಪೇಟೆ:**



ನಗರದ ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನಮಠದಲ್ಲಿ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಮೇ 10 ರಂದು ಕರ್ನಾಟಕದ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಶ್ರೀ ಬಸವೇಶ್ವರರ 891ನೆಯ ಜಯಂತಿ ಮಹೋತ್ಸವ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಮಹೋತ್ಸವ, 51ನೆಯ ಸರ್ವಧರ್ಮ ಉಜಿತ ಸಾಮೂಹಿಕ ವಿವಾಹ, ಹೇಮಕೂಟ ತ್ರೈಮಾಸಿಕ ಪತ್ರಿಕೆ ಬಿಡುಗಡೆ, ಹೇಮಕೂಟ ಕಿಂಡರ್ ಶಾಲೆ ಉದ್ಘಾಟನೆ ಹಾಗೂ ಮಾಸಿಕ ಶಿವಾನುಭವ ಸಂಪದ ಕಾರ್ಯಕ್ರಮಗಳು ಜರುಗಲಿವೆ ಎಂದು ಸಂಸ್ಥಾನ ಮಠ ತಿಳಿಸಿದೆ.

ಅಂದು ಬೆಳಿಗ್ಗೆ 6ಕ್ಕೆ ಶ್ರೀಮಠದಲ್ಲಿ ಅಯ್ಯಾಚಾರ ಲಿಂಗದೀಕ್ಷಾ ಮತ್ತು ಇಷ್ಟಲಿಂಗಧಾರಣಾ ಕಾರ್ಯಕ್ರಮಗಳು ಜರುಗಲಿವೆ.

ಸೋಮಸಮುದ್ರದ ಶ್ರೀ ಸಿದ್ದಲಿಂಗ ದೇಶಿಕರಿಂದ ಅಂದು ಬೆಳಿಗ್ಗ 8ಕ್ಕೆ ಷಟಸ್ಥಲ ಧ್ವಜಾರೋಹಣ. ನಂತರ ನಗರದ ಶ್ರೀ ಬಸವೇಶ್ವರ ವೃತ್ತದಲ್ಲಿನ ಜಗಜ್ಯೋತಿ ಶ್ರೀ ಬಸವೇಶ್ವರ ಅಶ್ವಾರೂಢ ಪುತ್ಥಳಿಗೆ ಮಾಲಾರ್ಪಣೆ ಅನಂತರ ಶ್ರೀ ಸಣ್ಣಕ್ಕಿ ವೀರಭದ್ರೇಶ್ವರಸ್ವಾಮಿ ದೇವಸ್ಥಾನದಿಂದ ಶ್ರೀ ಬಸವೇಶ್ವರರ ಭಾವಚಿತ್ರದ ಉತ್ಸವ ನಡೆಯಲಿದೆ.

ಬೆಳಿಗ್ಗ 10ಕ್ಕೆ ಹಿರೇಮಠ ಕರೇಗುಡ್ಡದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಶ್ರೀಧರಗಡ್ಡೆಯ ಶ್ರೀ ಮರಿಕೊಟ್ಟೂರು ದೇಶಿಕರ ಸಮ್ಮುಖದಲ್ಲಿ ವಧು-ವರರ ಮಾಂಗಲ್ಯಧಾರಣೆ, ಶಾಸಕ ಎಚ್.ಆರ್. ಗವಿಯಪ್ಪ, ಮಾಜಿ ಸಚಿವ ಆನಂದಸಿಂಗ್ ಉಪಸ್ಥಿತರಿರಲಿದ್ದಾರೆ.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಹೇಮಕೂಟ ಕಿಂಡರ್ ಶಾಲೆ ಉದ್ಘಾಟಿಸಲಿದ್ದಾರೆ. ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಹೇಮಕೂಟ ತ್ರೈಮಾಸಿಕ ಪತ್ರಿಕೆ ಬಿಡುಗಡೆಗೊಳಿಸಲಿದ್ದಾರೆ. ನಗರಸಭೆ ಅಧ್ಯಕ್ಷೆ ಎ.ಲತಾ, ಉಪಾಧ್ಯಕ್ಷ ಶೆಕ್ಷಾವಲಿ, ಸ್ಥಾಯಿಸಮಿತಿ ಅಧ್ಯಕ್ಷ ಹೆಚ್.ಸಂತೋಷಕುಮಾರ ಸೇರಿದಂತೆ ವಿವಿಧ ಸಮಾಜದ ಮುಖಂಡರು, ಪದಾಧಿಕಾರಿಗಳು ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದ್ದಾರೆ.

# ಇಂದು ನೀಟ್ ಪರೀಕ್ಷೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಮೇ 05 ರಂದು ಮಧ್ಯಾಹ್ನ 02 ರಿಂದ ಸಂಜೆ 05.20 ರವರೆಗೆ ನೀಟ್ ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ-ಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಸಿಆರ್‌ಪಿಸಿ ಕಲಂ 144 ರ ಅಡಿ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶಿಸಿದ್ದಾರೆ. ನಗರದ ಒಟ್ಟು 05 ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಒಳಗಿನ ಆವರಣವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿದ್ದಾರೆ. ಅನಧೀಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ ಹಾಗೂ ಆ ದಿನದಂದು ಮಧ್ಯಾಹ್ನ 01 ರಿಂದ ಸಂಜೆ 05.30 ರವರೆಗೆ ಪರೀಕ್ಷಾ ಕೇಂದ್ರಗಳ ಸುತ್ತ-ಮುತ್ತಲಿನ ಝೆರಾಕ್ಸ್ ಅಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಆದೇಶಿಸಲಾಗಿದೆ. ಈ ಆದೇಶವು ಪರೀಕ್ಷಾ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸಿದ್ದಾರೆ.

# ಎರಡು ದಿನ ಬಸ್ ಸಂಚಾರದಲ್ಲಿ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ಮೇ 07 ರಂದು ನಡೆಯುವ ಲೋಕಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ತ ಚುನಾವಣಾ ಕಾರ್ಯಕ್ಕೆ ಬಳ್ಳಾರಿ ವಿಭಾಗದಿಂದ ಒಟ್ಟು 190 ಬಸ್‌ಗಳನ್ನು ಸಾಂದರ್ಭಿಕ ಒಪ್ಪಂದದ ಮೇರೆಗೆ ಒದಗಿಸಲಾಗುತ್ತಿದ್ದು, ಮೇ 06(ಸೋಮವಾರ) ಮತ್ತು ಮೇ 07 (ಮಂಗಳವಾರ) ರಂದು ಬಳ್ಳಾರಿ, ಸಿರುಗುಪ್ಪ, ತೆಕ್ಕಲಕೋಟೆ, ಕುರುಗೋಡು, ಕುಡುತಿನಿ, ಕಂಪ್ಲಿ ಮತ್ತು ಸಂಡೂರು ಭಾಗದಿಂದ ವಿವಿಧೆಡೆ ತೆರಳುವ ದೈನಂದಿನ ಬಸ್‌ಗಳ ಸಂಚಾರದಲ್ಲಿ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ವಿಭಾಗದ ಕಕರಸಾ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ಅವರು ತಿಳಿಸಿದ್ದಾರೆ.

# ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ದಾಖಲಾತಿಗೆ ಪ್ರವೇಶ ಪರೀಕ್ಷೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಅಲ್ಪ ಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ (ಆಂಗ್ಲ ಮಾದ್ಯಮ) ಶಾಲೆ, ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ (ಸಿ.ಬಿ.ಎಸ್.ಇ) ಶಾಲೆಗಳ ಪ್ರಸ್ತಕ ವರ್ಷಕ್ಕೆ 6 ನೇ ತರಗತಿ ದಾಖಲಾತಿಗೆ ಮೇ 19 ರಂದು ಪ್ರವೇಶ ಪರೀಕ್ಷೆ ನಡೆಯಲಿವೆ ಎಂದು ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂ:08392200125/224, ಸಹಾಯವಾಣಿ ಕೇಂದ್ರ (24/7) ಮೊ: 8277799990 ಗೆ ಅಥವಾ >>4


14 ಭಾಷೆ
ಈಗ ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com



S.M.TRADERS & SERVICES
ATLAS COPCO
COMPRESSORS, HOSEPIPE, DRILL RODS, SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201



TAFE
ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ)
99801 27607
73533 06719



ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201



House For Sale
3 BHK independent Duplex House with Built Area 2300 sq.ft.
in an extent of 1500 sq.ft. for Sale
at Rajeev Nagar, 2nd Cross, Hospet
(adjacent KSSIDC Industrial Estate)
94409 86570



CHARIOT TOUR & TRAVELS
HOSAPETE, VIJAYANAGARA DIST.
Let's take a perfect dream destination with us!
BOOK NOW
JAGANATHA GOUDA M: 7483551730
SAGAR M: 7975748092
chariottoursandtravels48@gmail.com

ಹಂಪಿ ಟೈಮ್ಸ್ HAMPI TIMES

## ಬೆಳಕಿನ ಹಾದಿ

### ಅವಕಾಶಗಳ ಸದ್ವಿನಿಯೋಗವೇ ಪಾಂಡಿತ್ಯ

■ ಜಯಶ್ರೀ. ಎಂ.ಕೆ. ಹುಬ್ಬಳ್ಳಿ

ಒಂದು ದಟ್ಟಡವಿಯಲ್ಲಿ ಒಬ್ಬ ಗುರು ಇದ್ದನು. ಅವನ ಬಳಿ ಇಬ್ಬರು ಶಿಷ್ಯರಿದ್ದರು. ಗುರು ನಾಲ್ಕಾರು ವರ್ಷಗಳ ಕಾಲ ತನ್ನ ಇಬ್ಬರು ಶಿಷ್ಯರಿಗೆ ಎಲ್ಲಾ ವಿದ್ಯೆಗಳನ್ನು ಹೇಳಿಕೊಟ್ಟ. ಗುರುವಿಗೆ ಹಿಮಾಲಯ ಪರ್ವತಕ್ಕೆ ಹೋಗಿ ಬರುವ ಆಸೆಯಾಯಿತು. ತನ್ನ ಇಬ್ಬರೂ ಶಿಷ್ಯರಿಗೂ ಒಂದಿಷ್ಟು



ಬೀಜಗಳನ್ನು ನೀಡಿ, ಜೋಪಾನ ಮಾಡುವಂತೆ ಹೇಳಿ ಹಿಮಾಲಯಕ್ಕೆ ಹೊರಟುಹೋದನು.

ಐದಾರು ವರ್ಷಗಳ ಕಾಲ ಹಿಮಾಲಯದಲ್ಲಿ ತಪಸ್ಸು ಮಾಡಿ ಹಿಂತಿರುಗಿದನು. ಹಿಂದಿರುಗಿ ಬಂದಾಗ ಮೊದಲು ಹಿರಿಯ ಶಿಷ್ಯನನ್ನು ಭೇಟಿ ಮಾಡಿದ. ಬೀಜಗಳ ಬಗ್ಗೆ ಆತನನ್ನು ಕೇಳಿದ. ಹಿರಿಯ ಶಿಷ್ಯ ಗುರುವಿಗೆ ಒಂದು ಡಬ್ಬಿಯನ್ನು ತೋರಿಸಿ 'ಗುರುಗಳೇ ನೀವು ಆಶೀರ್ವಾದ ಮಾಡಿಕೊಟ್ಟ ಬೀಜಗಳನ್ನು ಇಲ್ಲಿ ಭದ್ರವಾಗಿ ಇಟ್ಟಿದ್ದೇನೆ. ಪ್ರತಿದಿನ ಡಬ್ಬಿಗೆ ಪೂಜೆ ಮಾಡಿ ಧೂಪ ದೀಪ ಬೆಳಗುತ್ತೇನೆ' ಎಂದ. ಶಿಷ್ಯನ ಬುದ್ಧಿಯನ್ನು ಅರ್ಥ ಮಾಡಿಕೊಂಡ ಗುರು ಡಬ್ಬಿಯನ್ನು ತೆರೆಯುವಂತೆ ಹೇಳಿದ. ಡಬ್ಬಿಯೊಳಗಿನ ಬೀಜಗಳೆಲ್ಲಾ ಹಾಳಾಗಿದ್ದವು.

ನಂತರ ಗುರು ಎರಡನೆಯ ಶಿಷ್ಯನ ಬಳಿ ಬಂದ. ಆತನನ್ನು ಸಹ ಬೀಜಗಳ ಬಗ್ಗೆ ಕೇಳದ. 'ಗುರುಗಳೇ, ನೀವು ಆಶೀರ್ವಾದ ಮಾಡಿಕೊಟ್ಟ ಬೀಜಗಳು ಸಾಮಾನ್ಯವಾದವುಗಳಲ್ಲ, ಅವುಗಳನ್ನು ಮಣ್ಣಿನಲ್ಲಿ ಹಾಕಿ ಬೆಳೆಸಿದೆ. ಅದರಿಂದ ನಾನು ಹಲವಾರು ರೀತಿಯ ಹಣ್ಣು ಹೂವುಗಳನ್ನು ಪಡೆದೆ. ಕಳೆದ ಐದು ವರ್ಷಗಳಲ್ಲಿ ಬೆಳೆಗಳಲ್ಲಿ ಬಂದ ಲಾಭದಿಂದ, ಆಶ್ರಯದಂತಹ ಒಂದು ಸಣ್ಣ ಕುಟೀರ ಸಹ ನಿರ್ಮಿಸಿಕೊಂಡಿರುವೆ. ಅಲ್ಲಿ ನಿಮ್ಮ ಪ್ರತಿನಿತ್ಯ ನಿಮ್ಮ ಫೋಟೋಗೆ ನಾನು ಬೆಳೆದ ಹೂಗಳಿಂದ ಪೂಜೆ ಮಾಡಿ, ಧೂಪ ದೀಪ ಬೆಳಗುತ್ತೇನೆ. ಫಲಗಳ ನೈವೇದ್ಯ ಮಾಡುತ್ತೇನೆ' ಎಂದು ಹೇಳಿ ಗುರುಗಳನ್ನು ಫಲಭರಿತ ಹಣ್ಣಿನ ಮರಗಳನ್ನು ಹೂವಿನ ಗಿಡಗಳನ್ನು ಗುರುವಿಗೆ ತೋರಿಸಿದ. ಇದರಿಂದ ಗುರುವು ಸಂತೃಪ್ತನಾದ.

ನಮಗೆ ದೊರೆತ ಅವಕಾಶಗಳನ್ನು ಸದ್ವಿನಿಯೋಗ ಮಾಡಿಕೊಂಡರೆ ಖಂಡಿತ ನಮಗೆ ಯಶಸ್ಸು ದೊರೆಯುತ್ತದೆ. ಮಾನವರಾಗಿ ಹುಟ್ಟಿದ ನಾವು ಆಲೋಚನೆಯನ್ನು ಮಾಡಲೇಬೇಕು. ಆಲೋಚನೆ ಅಥವಾ ವಿಚಾರವಿಲ್ಲದ ಜೀವನಕ್ಕೆ ಅರ್ಥವಿಲ್ಲ. ದೇವರು ನಮಗೆ ಸ್ವತಂತ್ರ ಆಲೋಚನೆಯ ವರ ನೀಡಿದ್ದಾನೆ. ಅದಕ್ಕೆ ಅಗತ್ಯ ನಿಯಂತ್ರಣವೂ ಬೇಕಿದೆ. ಕಡಿವಾಣವಿಲ್ಲದ ಆಲೋಚನೆ ಹುಚ್ಚುಕುದುರೆಯಂತೆ ಓಡತೊಡಗಿದರೆ ನಮ್ಮ ಬಾಳು ನಾಶವಾಗುವುದು. ಆದುದರಿಂದ ಆಲೋಚನೆ ಮಾಡಿ ಅದರ ಪರಿಣಾಮವನ್ನು ಅರ್ಥ ಮಾಡಿಕೊಂಡು ನಂತರ ಕಾರ್ಯಗತ ಮಾಡಬೇಕು. ಬಿಟ್ಟ ಬಾಣವನ್ನು ಹೇಗೆ ಮರಳಿ ಪಡೆಯಲು ಸಾಧ್ಯವಿಲ್ಲವೋ ಹಾಗೆಯೇ ಒಮ್ಮೆ ಆಡಿದ ಮಾತುಗಳನ್ನು ಹಿಂಪಡೆಯಲು ಸಾಧ್ಯವಿಲ್ಲ. ಮಾತನಾಡುವ ಮುನ್ನ ವಿಚಾರ ಮಾಡಿ ಮಾತನಾಡುವ ಕುಶಲತೆಯನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕಿದೆ.

ನಮ್ಮ ಮಾತು ಮತ್ತು ಕ್ರಿಯೆಗಳಿಂದ ಇತರರಿಗೆ ತೊಂದರೆಯಾಗಬಾರದು. ನಮ್ಮ ಕ್ರಿಯೆಯಿಂದ ಇತರರಿಗೂ ಲಾಭವಾದರೆ ಒಳ್ಳೆಯದು. ಇತರರ ಪ್ರಯತ್ನದಲ್ಲಿ ನಮ್ಮ ಸಹಾಯವಿರಬೇಕು. ಏಕೆಂದರೆ ಮನುಷ್ಯ ಸಂಘಜೀವಿ. ಇತರರ ಒಳಿತು ನಮ್ಮ ಒಳಿತಿಗೆ ಪೂರಕ ಎಂಬುದನ್ನು ಯಾವಾಗಲೂ ಗಮನದಲ್ಲಿಟ್ಟುಕೊಳ್ಳಬೇಕು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
**Contact for EVENT COVERAGE & Advertisements in Leading Hampi Times Daily News Paper**
**M: 94486 33038**

ಪ್ರತಿಯೊಂದನ್ನು ಬೇರೆಯವರಿಂದಲೇ ನಿರೀಕ್ಷಿಸುವುದು ನಮ್ಮ ಜಾಯಮಾನವಾಗಿದೆ. ಒಬ್ಬ ವಿಜ್ಞಾನಿ ಹೇಳಿದನಂತೆ.... the greatest threat to the mankind is the belief that someone else will save it ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ


# ಭೂತಾಯಿಯ ಒಡಲು.. ಧಗೆಯ ಕಡಲು

## (ಎಚ್ಚೆತ್ತುಕೋ ಮಾನವ.....ಕಾಲ ಮಿಂಚುವ ಮುನ್ನ)

ಎಲ್ಲಿ ನೋಡಿದರಲ್ಲಿ ಬಿಸಿಲ ಧಗೆಯಿಂದ ಒಣಗಿರುವ ಗಿಡ ಮರಗಳು, ನೆರಳು ಹುಡುಕಿ ಮಲಗುವ ಜಾನುವಾರುಗಳು, ಪಶು ಪಕ್ಷಿಗಳು.... ಇನ್ನು ಮನುಷ್ಯರದಂತೂ ಕೇಳಬೇಡಿ ಆಗೊಮ್ಮೆ ಈಗೊಮ್ಮೆ ಹುಶ್ ಎಂದು, ಅಬ್ಬ ಎಂದು ನಿಡುಸುಯ್ಯುವ ಮನುಷ್ಯರು. ದುಡ್ಡಿದ್ದವರು ಏರ್ ಕಂಡೀಷನರ್ ಗಳು ಏರ್ ಕೂಲರ್ಗಳ ಮೊರೆ ಹೋಗಿದ್ದರೆ ಉಳಿದವರು ಫ್ಯಾನುಗಳ ಮೊರೆ ಹೋಗಿದ್ದಾರೆ. ಯಾವುದಕ್ಕೂ ಕರೆಂಟ್ ಬೇಕಲ್ಲವೇ?? ಒಂದು ಕ್ಷಣ ಕರೆಂಟ್ ಹೋದರೆ ಒದ್ದಾಡುವ ಜನರ ಪರಿಸ್ಥಿತಿ ಯಾರಿಗೂ ಬೇಡ? ಮತ್ತೆ ಕೆಲವರು ಊರ ಹೊರಗಿರುವ ಮರಗಳ ದೊಡ್ಡ ದೊಡ್ಡ ಕಟ್ಟಡಗಳ ಕೆಳಗೆ ಕುಳಿತು, ಮಲಗಿ ದಣಿವಾರಿಸಿಕೊಳ್ಳುತ್ತಾರೆ.

ಈಗಾಗಲೇ ಭೂಮಿಯ ಒಡಲು ಕಾದು ಹೋಗಿದೆ. ಬಿಸಿಲಿನ ಬೇಗೆಗೆ ಗಿಡ ಮರಗಳು ಸುಟ್ಟು ಹೋಗುತ್ತಿವೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಇನ್ನು ಕೆಲವೇ ವರ್ಷಗಳಲ್ಲಿ ವಾತಾವರಣದಲ್ಲಿನ ತಾಪಮಾನವು ಇನ್ನಷ್ಟು ಹೆಚ್ಚಾಗಿ ಭೂಮಿಯ ಮೇಲಿನ ತೇವಾಂಶ ಕುಸಿದು ಹೋಗಬಹುದು. ವಿವಿಧ ಬಗೆಯ ಚರ್ಮರೋಗಗಳು ಆರೋಗ್ಯ ಸಂಬಂಧಿ ತೊಂದರೆಗಳು ಕಾಣಿಸಿಕೊಳ್ಳಬಹುದು. ಈಗಾಗಲೇ ಜನರು ಬಿಸಿಲಿನ ಶಾಖದಿಂದಾಗಿ ನಿರ್ಜಲೀಕರಣದಿಂದ, ವಾಂತಿ ಭೇದಿ ಕಾಲರಾದಂತಹ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇನ್ನು ತಾಪಮಾನವು ಹೀಗೆಯೇ ಮುಂದುವರೆದು ಹೆಚ್ಚಾಗುತ್ತಾ ಹೋದರೆ ಮನುಷ್ಯ ವಿಧವಿಧದ ಕಾಯಿಲೆಗಳಿಗೆ ತುತ್ತಾಗುತ್ತಾನೆ. ತನ್ನ ಗೋರಿಯನ್ನು ತಾನೇ ತೋಡಿಕೊಂಡಂತಹ ಪರಿಸ್ಥಿತಿ ನಮ್ಮದಾಗಿದೆ.

ಇದಕ್ಕೆಲ್ಲಾ ಕಾರಣ ನಮ್ಮ ವಿಸ್ಮೃತಿ. ಆಧುನೀಕರಣದ ಹೆಸರಿನಲ್ಲಿ ನಗರ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ, ದೇಶದ ಪ್ರತಿ ನಗರ, ಪಟ್ಟಣ, ಹಳ್ಳಿಗಳ ಓಣಿ ಓಣಿಗಳಲ್ಲಿ ಕಾಂಕ್ರೀಟ್ ರಸ್ತೆಗಳ ನಿರ್ಮಾಣ, ಅರಣ್ಯ ಮತ್ತು ಕೆರೆಕಟ್ಟೆಗಳ ಒತ್ತುವರಿ, ಮಳೆ ನೀರನ್ನು ಹಿಡಿದಿಟ್ಟುಕೊಳ್ಳದ ಬೇಜವಾಬ್ದಾರಿತನ, ಅತಿಯಾದ ಪ್ಲಾಸ್ಟಿಕ್ ಬಳಕೆ, ಗಿಡ ಮರಗಳ ಮಾರಣಹೋಮ ಇದಕ್ಕೆಲ್ಲಾ ಕಾರಣ ಎಂದು ಮೇಲ್ನೋಟಕ್ಕೆ ತೋರಿದರೂ.... ಇದು ಕೇವಲ ಒಂದೆರಡು ದಿನಗಳಲ್ಲಿ ಆಗಿರುವ ಬದಲಾವಣೆಯಲ್ಲ.





ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful HAMPI TIMES E-paper

ಪ್ರಪಂಚದ ಹವಾಮಾನ ತಜ್ಞರು, ವಿಜ್ಞಾನಿಗಳು ದಶಕಗಳ ಹಿಂದೆಯೇ ಈ ಕುರಿತು ಎಚ್ಚರಿಕೆ ನೀಡಿದ್ದರು. ಉತ್ತರ ಧ್ರುವಗಳಲ್ಲಿ ಸಾವಿರಾರು ವರ್ಷಗಳಿಂದ ಅಸ್ತಿತ್ವದಲ್ಲಿರುವ ಹಿಮದ ಬೃಹತ್ ನೀರ್ಗಲ್ಲುಗಳು ಕರಗಿ ಹೋಗುತ್ತಿರುವಾಗಲೇ ಅಪಾಯದ ಗಂಟೆ ಬಾರಿಸತೊಡಗಿತ್ತು. ಹಿಮಾಲಯದಲ್ಲಿ ಅಲ್ಲಲ್ಲಿ ಹಿಮಕುಸಿತವಾಗಿ, ಕರಗಿದ ಹಿಮದಿಂದ ಹಿಮಾಲಯದಲ್ಲಿ ಹುಟ್ಟಿರುವ ನದಿಗಳಲ್ಲಿ ಉಂಟಾದ ಪ್ರವಾಹದಿಂದಾಗಿ ಹಲವಾರು ಪ್ರಾಕೃತಿಕ ವಿಕೋಪಗಳಿಗೆ ನಾವು ತುತ್ತಾಗಿದ್ದೇವೆ. ಆಗಲೂ ನಾವು ಎಚ್ಚೆತ್ತುಕೊಳ್ಳಲಿಲ್ಲ.

ಬಾನಿಗೊಂದು ಎಲ್ಲೆ ಎಲ್ಲಿದೆ??ನಿನ್ನಾಸೆಗೆಲ್ಲಿ ಕೊನೆಯಿದೆ ಮನುಷ್ಯನ ಆಸೆಗೆ ಕೊನೆಯಿಲ್ಲ. ಕಾಡು ಪ್ರಾಣಿಗಳು ನಾಡಿನತ್ತ ಮುಖ ಮಾಡಿವೆ. ಅಲ್ಲಲ್ಲಿ ಕಾಡುಪ್ರಾಣಿಗಳ ದಾಳಿ ನಡೆಯುವುದನ್ನು, ಅದರ ವಿರುದ್ಧ ಜನರ ಆಕ್ರೋಶಗಳು ಪತ್ರಿಕೆಗಳಲ್ಲಿ ಆಗಾಗ ವರದಿಯಾಗುತ್ತಲೇ ಇವೆ. ಇದಕ್ಕೆ ಕಾರಣ ನಮ್ಮ ದುರಾಸೆ. ಅತಿಯಾದ ಜನಸಂಖ್ಯೆಯಿಂದಾಗಿ ಕಾಡನ್ನು ಒತ್ತುವರಿ ಮಾಡಿಕೊಂಡು ನಾಡು ಬೆಳೆಯುತ್ತಿದೆ. ತಮ್ಮ ಮೂಲ ಸ್ಥಾನವನ್ನು, ಆಹಾರವನ್ನು ಹುಡುಕಿಕೊಂಡು ಕಾಡು ಪ್ರಾಣಿಗಳು ಒತ್ತುವರಿಗೊಂಡ ಕಾಡಂಚಿನ ನಾಡಿನತ್ತ ಬರುವುದು ಸಹಜವಲ್ಲವೇ??

ಕೆಲವೇ ದಶಕಗಳ ಹಿಂದೆ ಒಂದೆರಡು ಮಳೆಯಾದರೆ ಕೆರೆಕಟ್ಟೆಗಳು ತುಂಬುತ್ತಿದ್ದವು. ಆದರೆ ವರದಿಗಳ ಪ್ರಕಾರ ಇದೀಗ ನಾಡಿನಲ್ಲಿರುವ ಕೆರೆ-ಕಟ್ಟೆಗಳು, ಡ್ಯಾಮ್ ಗಳಲ್ಲಿ ಅವುಗಳ ನಿರ್ವಹಣೆಯ ಸಾಮರ್ಥ್ಯದ ಶೇಕಡ 17ರಷ್ಟು ಮಾತ್ರ ನೀರಿದೆ. ಕಾರಣ ನಾವೇ. ಸರ್ಕಾರವೇ ಮಾಡಲಿ, ಪಂಚಾಯಿತಿಗಳೇ ಮಾಡಲಿ ಪಾಲಿಕೆಗಳು ಮಾಡಲಿ ಎಂದು ಜಲ ಮೂಲಗಳ ನಿರ್ವಹಣೆಯನ್ನು ಇಸ್ ಕೀ ಟೋಪಿ ಉಸ್ಕಿ ಸರ್, ಉಸ್ಕಿ ಟೋಪಿ ಇಸ್ ಕಿ ಸರ್ ಎಂಬಂತೆ ತಮ್ಮ ತಮ್ಮ ಜವಾಬ್ದಾರಿ ಗಳಿಂದ ನುಣುಚಿಕೊಳ್ಳುವ ಇಲ್ಲವೇ ಬೇರೊಬ್ಬರಿಗೆ ವರ್ಗಾಯಿಸುವ ಜನ ಮತ್ತು ಸರಕಾರಿ ಸಂಸ್ಥೆಗಳು ನಮ್ಮಲ್ಲಿವೆ. ಇವರಿಬ್ಬರ ನಡುವಣ ಜಗಳವನ್ನು ಬಗೆಹರಿಸುವ ಹೊತ್ತಿಗೆ ಒಂದೆರಡು ಮಳೆಗಳಾಗಿ ತಕ್ಕಮಟ್ಟಿಗೆ ಕೆರೆಕಟ್ಟೆಗಳು ತುಂಬುತ್ತವೆ. ಅಲ್ಲಿಗೆ ಜನರ ಜೊತೆಗೆ ಸರ್ಕಾರದ ಆಡಳಿತ ಕಚೇರಿ ಗಳು ಕೂಡ ಸುಮ್ಮನಾಗಿಬಿಡುತ್ತವೆ. ಮತ್ತೆ ಅಭಿವೃದ್ಧಿ ಕಾರ್ಯಗಳು ನೆನಪಾಗುವುದು ಭೂಮಿಯ ಒಡಲೆಲ್ಲ ಬರಿದಾಗಿ ಕೆರೆಕಟ್ಟೆಗಳಲ್ಲಿ ನೀರು ಕಾಣೆಯಾದಾಗ ಮಾತ್ರ!

ಒಂದು ದೇಶದ ಅಭಿವೃದ್ಧಿ ಆ ದೇಶದಲ್ಲಿರುವ ಬೃಹತ್ ಕಟ್ಟಡಗಳು, ಫ್ಲೈ ಓವರಗಳು, ಕಾಂಕ್ರೀಟ್ ರಸ್ತೆಗಳು ಮತ್ತು ವೈಜ್ಞಾನಿಕ ಆವಿಷ್ಕಾರಗಳಲ್ಲಿ ಇಲ್ಲ. ತಮ್ಮ ದೇಶದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ನೀರು, ಆಹಾರ, ವಿದ್ಯುತ್ ಮತ್ತು ವಸತಿ ವ್ಯವಸ್ಥೆಗಳಲ್ಲಿ ಸಂಪೂರ್ಣ ಸ್ವಾವಲಂಬನೆಯನ್ನು ಹೊಂದಿದ್ದು ಪ್ರತಿ ಮನೆಯು ಕನಿಷ್ಠ ಸೌಲಭ್ಯಗಳನ್ನು ಹೊಂದಿರುವ, ಬಡತನದ ರೇಖೆಯಿಂದ ಮೇಲಿರುವ ನೆಮ್ಮದಿಯ ಸೂಚ್ಯಂಕ ಹೆಚ್ಚಿರುವ ದೇಶ ಅದೆಷ್ಟೇ ಪುಟ್ಟದಾದರೂ ಸ್ವಾವಲಂಬಿಯೇ.

ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚು ಒಪ್ಪಿಕೊಳ್ಳೋಣ... ಅಂತೆಯೇ ಅವಶ್ಯಕತೆಗಳು ಕೂಡ. ಆದರೆ ನಮ್ಮ ಜನರ ಮಾನಸಿಕತೆ ವಿಭ್ರಮೆ ಹುಟ್ಟಿಸುವಂತದ್ದು. ಅದೆಷ್ಟೇ ಲಕ್ಷಾಂತರ ವಿಜ್ಞಾನಿಗಳು ಮಂಡಿಯೂರಿ ಬೇಡಿಕೊಂಡರೂ ಒಂದು ಪರ್ವತವನ್ನು, ಒಂದು ನದಿಯನ್ನು ಆವಿಷ್ಕರಿಸಲಾರರು.

ಬೃಹತ್ ಯಂತ್ರಗಳನ್ನು ಬಳಸಿ ಕ್ಷಣಮಾತ್ರದಲ್ಲಿ ಕಾಡನ್ನು ಸವರುವ ಜನ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಒಂದೇ ದಿನದಲ್ಲಿ ಒಂದು ಗಿಡವನ್ನು ಕೂಡ ಬೆಳೆಸಲಾರರು. ಪ್ರತಿಯೊಂದನ್ನು ಬೇರೆಯವರಿಂದಲೇ ನಿರೀಕ್ಷಿಸುವುದು ನಮ್ಮ ಜಾಯಮಾನವಾಗಿದೆ. ಒಬ್ಬ ವಿಜ್ಞಾನಿ ಹೇಳಿದನಂತೆ.... the greatest threat to the mankind is the belief that someone else will save it ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ ಇದರರ್ಥ ಈ ಮಾನವ ಕುಲದ ಅತಿ ಭಯಾನಕ ಸತ್ಯವೆಂದರೆ ಬೇರೆ ಯಾರಾದರೂ ಈ ಕೆಲಸವನ್ನು ಮಾಡುತ್ತಾರೆ ಎಂಬ ಭ್ರಮೆಯನ್ನು ನಾವೆಲ್ಲ ಹೊಂದಿರುವುದು.

ನಮ್ಮ ಮೂಲಭೂತ ಅವಶ್ಯಕತೆಗಳಾದ ನೀರು, ಆಹಾರಗಳ ಸ್ವಾವಲಂಬನೆಯನ್ನು ನಾವು ಹೊಂದಲೇಬೇಕು. ಎಲ್ಲವನ್ನೂ ಸರ್ಕಾರವೇ ಮಾಡಲಿ ಎಂದು ಕಾಯುವ ಅವಶ್ಯಕತೆ ಇಲ್ಲ. ಸರ್ಕಾರದ ಸವಲತ್ತುಗಳು ನಮ್ಮ ತಟ್ಟೆಗೆ ಬಂದು ಬೀಳಬಹುದು, ಆದರೆ ಉಣ್ಣಬೇಕಾದವರು ನಾವಲ್ಲವೇ? ನಮ್ಮ ಮನೆಗಳ ಮಟ್ಟಿಗೆ ನಮ್ಮ ಭಾಗದಲ್ಲಿ ಆಗುವ ಮಳೆ ನೀರನ್ನು ಹಿಡಿದಿಟ್ಟುಕೊಂಡು ಕನಿಷ್ಠ ಕುಡಿಯುವ ನೀರನ್ನು ಹೊಂದುವ ಮಳೆ ಕೊಯ್ಲು ಪದ್ಧತಿಯನ್ನು ನಾವೇಕೆ ಅಳವಡಿಸಿಕೊಳ್ಳಬಾರದು? ಮನೆ ಕಟ್ಟುವವರು, ದೊಡ್ಡ ದೊಡ್ಡ ಬೃಹತ್ ಕಟ್ಟಡಗಳಲ್ಲಿ ಕಡ್ಡಾಯವಾಗಿ ಮಾಡಿಕೊಳ್ಳಿ ಅಳವಡಿಸುವ ಮೂಲಕ ಜಲ ಸ್ವಾವಲಂಬನೆ ಯನ್ನು ಹೊಂದಬಹುದು. ಇನ್ನು ಪ್ರತಿ ಊರುಗಳಲ್ಲಿ, ಗ್ರಾಮಗಳಲ್ಲಿ ನಮ್ಮ ಊರು ನಮ್ಮ ಜವಾಬ್ದಾರಿ ಎಂಬ ಭಾವದಲ್ಲಿ ಸಾಮುದಾಯಿಕ ನಾಯಕತ್ವದಲ್ಲಿ ಆಯಾ ಊರುಗಳ ಕೆರೆಕಟ್ಟೆಗಳ ಹೂಳು ತೆಗೆಯುವ, ಪುನರುಜ್ಜೀವನಗೊಳಿಸುವ ಮಳೆಗಾಲದ ಹೊತ್ತಿಗೆ ಎಲ್ಲೆಡೆಯಿಂದ ಹರಿದು ಬರುವ ಮಳೆ ನೀರನ್ನು ಸಂಗ್ರಹಿಸಲು ಅನುವಾಗುವಂತೆ ಸಜ್ಜು ಮಾಡಬಹುದು. ಇಲ್ಲಿ ಯಾವುದೇ ರೀತಿಯ ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲರೂ ಸೇರಿ ಈ ಕಾರ್ಯವನ್ನು ಮಾಡಿದಾಗ ನನ್ನದು ಎಂಬ ಅಭಿಮಾನವೂ ಜವಾಬ್ದಾರಿಯೂ ಒಟ್ಟಿಗೆ ಒಡ ಮೂಡುತ್ತದೆ. ಇದುವೇ ನಮ್ಮ ಸದ್ಯದ ಅವಶ್ಯಕತೆ.

ಇದೇ ಸಮುದಾಯಿಕ ನೇತೃತ್ವದಲ್ಲಿ ಗುಂಪು ತೋಪುಗಳನ್ನು ನಿರ್ಮಿಸುವ, ಹಳ್ಳ ನದಿಗಳ ಅಂಚುಗಳಲ್ಲಿ ಮಳೆ ನೀರಿಗೆ ಮಣ್ಣು ಕೊಚ್ಚಿ ಹೋಗದಂತೆ ನೂರಾರು,ಸಾವಿರಾರು ಗಿಡಗಳನ್ನು ನೆಟ್ಟು ಪೋಷಿಸಬೇಕು. ಜಾತಿ, ಮತ, ಪಕ್ಷ, ಪಂಥಗಳ ಭೇದವಿಲ್ಲದೆ ಊರ ಹಿರಿಯರ ನೇತೃತ್ವದಲ್ಲಿ ಇಂತಹ ಸಮುದಾಯಿಕ ಕಾರ್ಯಗಳನ್ನು ಕೈಗೊಂಡಾಗ ಪುಟ್ಟ ಪುಟ್ಟ ವನಗಳನ್ನು ನಾವು ನಿರ್ಮಿಸಲು ಸಾಧ್ಯ. ಮಳೆಯನ್ನು ಆಕರ್ಷಿಸುವ ಕಾಡುಗಳು, ಹಸಿರು ತೋಪುಗಳು ನಮ್ಮ ಇಂದಿನ ಅವಶ್ಯಕತೆ. ಅನಾದಿಕಾಲದಿಂದಲೂ ಕಾಡಿನಲ್ಲಿಯೇ ಹೆಚ್ಚು ಮಳೆ ಸುರಿಯುತ್ತದೆ. ದೊಡ್ಡ ದೊಡ್ಡ ಬೆಟ್ಟ ಗುಡ್ಡಗಳಲ್ಲಿ ಕೂಡ ಮಳೆಯ ಪ್ರಮಾಣ ತುಸು ಹೆಚ್ಚು. ಆದ್ದರಿಂದಲೇ ನಮ್ಮ ಪೂರ್ವಿಕರು ಹಲವಾರು ಬೆಟ್ಟ ಗುಡ್ಡಗಳ ನೀರು ಕೆಳಗೆ ಹರಿದು ಬರುವ ಜಾಗದಲ್ಲಿ ದೊಡ್ಡ ಕೆರೆಗಳನ್ನು ನಿರ್ಮಿಸುತ್ತಿದ್ದರು. ಅದು ಸುತ್ತಲ ಹತ್ತು ಹಳ್ಳಿಗಳ ನೀರಿನ ಅವಶ್ಯಕತೆಯನ್ನು ಪೂರೈಸುತ್ತಿತ್ತು.

ಮತ್ತೆ ನಾವು ನಮ್ಮ ಗ್ರಾಮೀಣ ಬದುಕಿನತ್ತ ಮುಖ ಮಾಡಬೇಕು. ನಮ್ಮ ಹಿರಿಯರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ದೂರದರ್ಶಿತ್ವವನ್ನು, ಸರಳ ಜೀವನ ತತ್ವಗಳನ್ನು ನಾವು ಕೂಡ ಅಳವಡಿಸಿಕೊಳ್ಳಬೇಕು. ನಮ್ಮ ಹಿರಿಯರು ನಮ್ಮ ಸುತ್ತಣ ಪರಿಸರವನ್ನು ಎಂದೂ ಕೇವಲವಾಗಿ ಭಾವಿಸಲಿಲ್ಲ ಬದಲಾಗಿ ನಾವು ಮೆಟ್ಟುವ ಈ ನೆಲವನ್ನು ನಮ್ಮನ್ನು ಪೊರೆಯುವ ಭೂಮಿ ತಾಯಿ ಎಂದು, ನಾವು ಕುಡಿಯುವ ನೀರನ್ನು ಜೀವದಾಯಿನಿ ಗಂಗಾ ಮಾತೆಯೆಂದು ನಮ್ಮ ಸುತ್ತಣ ಪ್ರಕೃತಿಯನ್ನು ವನ ದೇವತೆಯೆಂದು, ಪ್ರತಿಯೊಂದು ಮರದಲ್ಲಿನ ಅಂತಃಶಕ್ತಿಯನ್ನು ಅರಿತು ವೃಕ್ಷ ದೇವತೆ ಎಂದು ಪೂಜಿಸಿದ್ದಾರೆ. ಮರ ಕಡಿಯುವ ಮುನ್ನ 10 ಬಾರಿ ಯೋಚಿಸುತ್ತಿದ್ದ ನಮ್ಮ ಪೂರ್ವಜರು ಮರಕ್ಕೆ ಕೊಡಲಿ ಏಟು ಹಾಕಿದರೆ ವೃಕ್ಷ ದೇವತೆ ಮುನಿಸಿಕೊಂಡಾಳು ಎಂದು ಭಾವಿಸಿ ಜೀವನ ಸಾಗಿಸುತ್ತಿದ್ದರು. ಅಂದು ನಮ್ಮೆಲ್ಲರ ದೃಷ್ಟಿಯಲ್ಲಿ ಮೌಢ್ಯತೆ ಎಂದು ಕರೆಸಿಕೊಂಡ ಎಷ್ಟೋ ವಿಷಯಗಳು ಇಂದು ಅವರ ಪ್ರಕೃತಿ ಪ್ರೇಮವನ್ನು, ಪರಿಸರ ಪ್ರಜ್ಞೆಯನ್ನು, ಮಾನವನ ವಿಕಾಸಕ್ಕೆ ಪರಿಸರ ಕೊಡುವ ಕಾಣಿಕೆಯ ಅರಿವನ್ನು ತೋರುತ್ತದೆ. ನಮ್ಮ ಪೂರ್ವಜರು ತಮ್ಮ ಸುತ್ತಣ ಪರಿಸರವನ್ನು ಕಲುಷಿತಗೊಳ್ಳದಂತೆ ಆರಾಧನೆಯ ದೃಷ್ಟಿಯಿಂದ ನೋಡುತ್ತಾ ಪರಿಸರದೊಂದಿಗೆ ಸಮರಸ ಜೀವನವನ್ನು ಸಾಗಿಸುತ್ತಿದ್ದರು.

ಈಗಾಗಲೇ ಕಾಲ ಮಿಂಚಿದೆ. ಗಡು ಮೀರುತ್ತಿದೆ ನಿಜ ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಇನ್ಯಾವಾಗಲೂ ಎಚ್ಚೆತ್ತುಕೊಳ್ಳಲು ಸಾಧ್ಯವಾಗದು. ಆದ್ದರಿಂದ ತುರ್ತು ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುವಂತೆ ಯುದ್ಧೋಪಾದಿಯಲ್ಲಿ ಪರಿಸರ ರಕ್ಷಣೆಯಲ್ಲಿ ಪ್ರತಿದಿನ, ಪ್ರತಿ ಕ್ಷಣ ತೊಡಗಿಕೊಳ್ಳೋಣ. ಮನೆ ಮನೆಗಳಲ್ಲೂ ಉದ್ಯಾನಗಳನ್ನು ನಿರ್ಮಿಸಿ ಹಸಿರನ್ನು ಹೆಚ್ಚಿಸೋಣ. ಪ್ಲಾಸ್ಟಿಕ್ ಬಳಕೆಗೆ ಸ್ವಯಂ ಕಡಿವಾಣವನ್ನು ಹಾಕೋಣ. ನೀರನ್ನು ಮಿತವಾಗಿ ಬಳಸುತ್ತಾ ಉಳಿಸೋಣ. ಪರಿಸರಕ್ಕೆ ಹಾನಿಯಾಗುವ ಎಲ್ಲ ವಸ್ತುಗಳನ್ನು ಸಾಧ್ಯವಾದಷ್ಟು ನಿಷೇಧಿಸೋಣ. ಸರಳ ಜೀವನ ಪದ್ಧತಿಗಳನ್ನು ಅಳವಡಿಸಿಕೊಂಡು ಆಂತರಿಕವಾಗಿ ಹಿರಿದಾದ ನೆಮ್ಮದಿಯ ಜೀವನವನ್ನು ಕಟ್ಟಿಕೊಳ್ಳೋಣ.

ನಮ್ಮ ನಂತರವೂ ನಮ್ಮ ಮುಂದಿನ ಪೀಳಿಗೆಯವರು ನಮ್ಮ ಕೊಡುಗೆಯನ್ನು ಸ್ಮರಿಸುವಂತಹ ಸುಂದರ ಜಗತ್ತನ್ನು ಅವರ ಪಾಲಿಗೆ ಉಳಿಸೋಣ, ಬೆಳೆಸೋಣ.

# ಬೇಕಾಗಿದ್ದಾನೆ ಸಸಿಪಾಲ

ಕೆಲ ದಶಕಗಳ ಹಿಂದೆ ನೋಡಿದರೆ ಜೀವನವು ಹಿತಕರವಾಗಿತ್ತು. ಭಾರತವು ಹಳ್ಳಿಗಳಿಂದ ಕೂಡಿದೆ ಎನ್ನುವ ಮಾತಿನಂತೆ ನಾಲ್ಕಾರು ಹಳ್ಳಿಗಳಿಗೆ ಒಂದು ಪೇಟೆ ಇರುತ್ತಿತ್ತು, ಜನರಿಗೆ ದಿನನಿತ್ಯ ಬಳಕೆಯ ಹಾಗೂ ಉಪಯುಕ್ತ ಸಾಮಗ್ರಿಗಳು ಒಂದೆಡೆ ದೊರೆಯುತ್ತಿತ್ತು ಹಾಗೂ ಎಲ್ಲರೂ ಒಂದೆಡೆ ಸೇರುವಂತೆ ಮಾಡುವ ಜಾಗವದು. ಕಾಲ್ನಡಿಗೆಯಲ್ಲಿ ಪೇಟೆ ಸೇರುವವರು ಒಂದಿಷ್ಟು ಮಂದಿ ಮತ್ತೆ ಸ್ವಲ್ಪ ದೂರದವರು ಕುದುರೆ ಜಟಕಾ, ಎತ್ತಿನಬಂಡಿ, ಸೈಕಲ್ ಬಸ್ಸು ಇತ್ಯಾದಿ... ಗಳಿಂದ ಪೇಟೆ ಸೇರುತ್ತಿದ್ದರು. ಬಸ್ಸು ನಿಲ್ದಾಣ ಇರದಿದ್ದರೆ ಒಂದು ಹೆಮ್ಮರದ ಕೆಳಗೆ ಕಾಯುತ್ತಾ ನಾಲ್ಕು ಮಾತುಗಳನ್ನು ಆಡುತ್ತಾ ಖುಷಿಯಿಂದ ತೆರಳುತ್ತಿದ್ದರು, ಇವರ ಬರುವಿಕೆಯನ್ನು ಕಾಯುವ ಚಿಣ್ಣರ ಗುಂಪು, ದೂರದಲ್ಲಿ ಬರುವವರನ್ನು ಕಂಡರೆ ಇವರ ಹರ್ಷಕ್ಕೆ ಮಿತಿಯೇ ಇರುತ್ತಿರಲಿಲ್ಲ.

ಹಚ್ಚ – ಹಸಿರ ಹೊಲ ಗದ್ದೆಗಳ ಮಧ್ಯೆ ರಸ್ತೆ , ಊರಿನ ಹೆಬ್ಬಾಗಿಲು ದಾಟಿದಾಗಿನಿಂದ ಮತ್ತೊಂದು ಊರು ಬರುವವರೆಗೆ ಗಿಡಮರ ಹೊಲ, ಗದ್ದೆಗಳಲ್ಲಿ ಪಯಣ ಸಾಗುತ್ತಿತ್ತು. ಕಾಲಕಾಲಕ್ಕೆ ಮಳೆ ಬಂದು ಬೆಳೆ ಸಂಪಾಗಿರುತ್ತಿತ್ತು. ನಾವು ನಮ್ಮವರೆಂಬ ಭಾವನೆ, ಕಷ್ಟ ಸುಖಕ್ಕೆ ಭುಜಕ್ಕೆ ಭುಜ, ನಿವಾಸಕ್ಕೆ ನಿಷ್ಕಲ್ಮಶ ಮನಸ್ಸಿನಿಂದ ಜಾಗಗಳನ್ನು ಕೊಟ್ಟು ನೆಮ್ಮದಿಯ ಸಹಬಾಳ್ವೆಯ ಜೀವನವನ್ನು ನಡೆಸಿದ್ದಾರೆ ನಮ್ಮ ಹಿರಿಯರು.

ಇಂದೂ ನಾವು ಜೀವಿಸುತ್ತಿರುವ ಜೀವನಶೈಲಿಯಲ್ಲಿ ಅಜಗಜಾಂತರ ವ್ಯತ್ಯಾಸಗಳನ್ನು ಕಾಣಬಹುದು. ಕೊಂಡುಕೊಳ್ಳುವುದಕ್ಕೆ ಮತ್ತು ಮಾರುವುದಕ್ಕಿಂದೆ ಕೆಲ ಜಾಲತಾಣಗಳು, ಕುಳಿತಲ್ಲಿಯೇ ವ್ಯವಹಾರ, ಇರುವಲ್ಲಿಯೇ ಊಟ ತಂದುಕೊಡುವ ಸೌಲಭ್ಯ. ದೈಹಿಕ ಚಟುವಟಿಕೆ ಕಡಿಮೆಯಾಗಿ ಆರೋಗ್ಯಕ್ಕಾಗಿ ತರಬೇತಿ ಶಿಬಿರಗಳ ಮೊರೆ ಹೋಗಬೇಕಾಗಿದೆ.

ಊರಿಂದ ಊರಿನ ಅಂತರ ದಲ್ಲಿ ಬಂಜರು ಭೂಮಿಗಳು, ಹಿಂದೆ



ಊರೆಂದರೆ ಹಸಿರಿನ ಮುನ್ನೋಟವಿದ್ದದ್ದು ಈಗ ಡಾಂಬರೀಕರಣದ ರಸ್ತೆ, ಉದ್ದುದ್ದ ಲೈಟ್ ಕಂಬಗಳು, ಮಾರಾಟಕ್ಕಿವೆ ಎಂಬ ಬೋರ್ಡ್ ಗಳು, ಊರಿನ ಹೆಬ್ಬಾಗಿಲಿನಿಂದಲೇ ಎನ್, ಎ ಪ್ಲಾಟ್ಗಳು ಊರಿನ ಕಳೆಯನ್ನು ಇಮ್ಮಡಿಗೊಳಿಸುತ್ತಿದೆ.

ಹಳ್ಳಿಯಿಂದ ದಿಲ್ಲಿವರೆಗೂ ರಿಯಲ್ ಎಸ್ಟೇಟ್ ಉದ್ಯಮವು ತಾರಕಕ್ಕೇರಿದೆ. ಅಂಗುಲ ಜಾಗಕ್ಕೆ ಈಗ ಸಿಕ್ಕಾಪಟ್ಟೆ ದುಡ್ಡು.

ಪ್ರಸ್ತುತ ಹವಮಾನ ವೈಪರಿತ್ಯ ಉಂಟಾಗಿದ್ದು ಉಷ್ಣಾಂಶವಂತು ಮಿತಿಮೀರಿದೆ, ಅಕಾಲಿಕ ಮಳೆ ಬಿರುಬಿಸಿಲು ಅನುಭವಿಸುತ್ತೇವೆ. 40 ರಿಂದ 47.5 ತೀವ್ರತೆಯ ಉಷ್ಣಾಂಶ ನಮ್ಮನ್ನು ಸುಟ್ಟು ಹಾಕುತ್ತಿದೆ. ಇದಕ್ಕೆಲ್ಲ ಕಾರಣವಾದರೂ ಏನು? ಕಾರಣವಾದವರ್ಯಾರು? ಸರಿಪಡಿಸುವುದೇಗೆ? ಯೋಚಿಸಬೇಕಿದೆ.

ದಿನದಿಂದ ದಿನಕ್ಕೆ ಸೂರ್ಯ ಬಲಗೊಂಡಿದ್ದು ಜನಸಾಮಾನ್ಯರ ಸ್ಥಿತಿ ಚಿಂತೆಗೀಡಾಗಿದೆ. ಮಕ್ಕಳ, ವೃದ್ಧರ ಕಾಳಜಿ ಅವಶ್ಯಕ.

ನಾವುಗಳು ಡಾಂಬರೀಕರಣಕ್ಕೆ ಮಾರುಹೋಗಿ, ಉದ್ದುದ್ದ ರಸ್ತೆಗಳು ಡಾಂಬರೀಕರಣದಿಂದಾಗಿ ನೀರು ಇಂಗದೆ ತಾಪಮಾನ ಹೆಚ್ಚುತ್ತಿದೆ. ಅವಶ್ಯಕತೆಯ ಮೀರಿ ವಾಹನಗಳ ಚಲನೆ ಹಾಗೂ ವಾಹನಗಳ ಹೊಗೆ ಸಂಗ್ರಹಣೆಯಿಂದ ಹವಮಾನ ಕೆಡುತ್ತಿದೆ. ಓಝೋನ್ ಪದರಿನ ಬಗ್ಗೆ ಎಲ್ಲರಿಗೂ ತಿಳಿಸಬೇಕಿದೆ.

ಕಾಡು ಬೆಟ್ಟಗಳಲ್ಲಿ ಹೋಮ್ ಸ್ಟೇ , ರೆಸಾರ್ಟಗಳನ್ನೂ ದೊಡ್ಡ ದೊಡ್ಡ ಅಪಾರ್ಟ್ ಮೆಂಟ್ ಮಾಡಿಕೊಂಡು, ಪರಿಸರ ನಾಶ ಮಾಡಿ ಪ್ರಾಣಿ ಪ್ರಕ್ಷಿಗಳಿಗಲ್ಲದೆ ನಮಗೆ ನಾವೇ ವಂಚಿಸಿಕೊಳ್ಳುತ್ತಿದ್ದೇವೆ, ಒಂದೆಡೆ ಹಿಮಾಲಯದ ಹಿಮ ಬಂಡೆಗಳು ಕರಗುತ್ತಿವೆ, ವರ್ಷದಿಂದ ವರ್ಷಕ್ಕೆ ಉಷ್ಣಾಂಶ ಹೆಚ್ಚುತ್ತಿದೆ.

ಪ್ರತಿ ಸಮಸ್ಯೆಗೂ ಒಂದು ಪರಿಹಾರ ಇರುವಂತೆ ಇದಕ್ಕೆ ಪರಿಹಾರವಾಗಿ ನಾವು ಪರಿಸರವನ್ನು ಬೆಳೆಸಬೇಕಾಗಿದೆ. ಪರಿಸರದ ಮರಣ ರೋಗದ ಜನನ, ಭೂಮಿ ಮೇಲೆ ವಾಸಿಸುವ ನಾವು ಪರಿಸರದ ಅಧೀನದಲ್ಲಿರಬೇಕೆ ಒರತು ಪರಿಸರವನ್ನು ಹಾಳು ಮಾಡುವುದರಲ್ಲಿ ಅಲ್ಲಾ. ಗಿಡ ಮರ ಬೆಳೆಸುವುದು ನಮ್ಮ ಕರ್ತವ್ಯವಾಗಿದೆ. ನಶಿಸಿರುವ ಕಾಡನ್ನು ಮತ್ತೆ ಪುನಃಸ್ತಾಪಿಸಬೇಕಿದೆ. ಪರಿಸರ ದಿನದಂದು ಸಸಿಗಳನ್ನು ಇಟ್ಟು ಮರೆಯದ ಮನುಜರಾಗಬೇಕು, ಅವುಗಳನ್ನು ಕಾಯುವ ಸೈನಿಕ ನಾವಾಗಿರಬೇಕು, ಎನ್, ಎ ಪ್ಲಾಟ್ಗಳು ಮತ್ತೆ ಕೃಷಿ ಭೂಮಿ ಆಗುವ ಕಾಲ ಅದಕ್ಕಾಗಿಯೇ ಬೇಕಾಗಿದ್ದಾನೆ ಸಸಿಪಾಲ ಸಂಪರ್ಕಿಸಲು ನಿಮ್ಮ ಮನೆಯ ಕನ್ನಡಿಯೊಳಗೆ ಇಣುಕಿ.

**– ಯರಿಯಕ್ಷ**

ಕವಿ ಮನಸು

## ಹೃದಯ

ನನ್ನ ಹೃದಯ ಬಾಳ ಚಿಕ್ಕದು
ಬಾಳ ಜೋಪಾನ ಮಾಡ್ತಿನಿ
ಕುಂದು ಕೊರತೆ ಮಾಡಾಂಗಿಲ್ಲ
ಚೆಂದಾಗಿ ಇರ್ಲಿಂತ ಬೇಡ್ಕೊಂತಿನಿ॥

ಯಾರರ ಏನಾರ ಅಂದ್ರ
ಬಾಳ ಬ್ಯಾಸ್ರ ಬಾಡ್ಕೊಂತ್ತೈತಿ
ಯಾರು ಏನೂ ಅನ್ಬಾರ್ದಂತ
ಅನ್ನವರಿಂದ ದೂರ ಇರ್ತಿನಿ॥

ನಾ ಒಳ್ಳೆ ಕೆಲ್ಸ ಮಾಡಿದ್ರ
ಬಾಳ ಖುಷಿ ಪಡ್ತದ
ಒಳ್ಳೆ ಕೆಲ್ಸ ಮಾಡ್ಬೇಕಂತ
ಅಲ್ಲಲ್ಲಿ ಹುಡುಕ್ತಾ ಇರ್ತಿನಿ॥

ನನ್ನ ಹೃದಯಕ್ಕ ಘಾಸಿಯಾಗ್ದಂಗ
ನಿತ್ಯ ಜಾಗೃತೆ ವಹಿಸ್ತಾನೆ ಇರ್ತಿನಿ
ಒಮ್ಮೆಮ್ಮೆ ನನ್ಗ ಗೊತ್ತಾಗ್ದಂಗ
ನನ್ನ ಹೃದಯ ಬ್ಯಾಸ್ರಾ ಮಾಡ್ಕೊಂತ್ತೈತಿ॥

ನನಗೂ ಸ್ನೇಹಿತರ ಬಳ್ಗ ಬೇಕನ್ತತ್ತ
ಕೈ ಕೊಟ್ರ ಹೃದಯಕ್ಕ ಬ್ಯಾಸ್ರಾಗ್ತೈತಿ
ಹೃದಯಕ್ಕ ಬ್ಯಾಸ್ರ ಮಾಡ್ದಾಂಗ
ಇರೋರ್ನ ನಾ ಇನ್ನೂ ಹುಡುಕಾಹತ್ತಿನಿ॥

ನಾ ಕೆಟ್ಟ ಕೆಲ್ಸ ಮಾಡ್ದಾಂಗ
ನನ್ನ ಹೃದಯ ಬುದ್ದಿ ಹೇಳ್ತೈತಿ
ಹೃದಯ ಹೇಳ್ದಂಗ ಕೇಳ್ತಿನಂತ
ನಾ ಇನ್ನೂ ಬದುಕಿ ಉಳ್ದಿನಿ॥

ಹೃದಯ ಚಿಕ್ಕದಂತ ತಾಚ್ಚಾರ ಮಾಡ್ಬೇಡ್ರಿ
ಹೃದಯ ನೀವ್ ಕಾಯ್ಕೊಂಡಿದ್ರ
ನಿಮ್ಮನ್ ಹೃದಯ ಸದಾ ಕಾಯ್ತದ
ನೂರು ವರ್ಷ ಬದುಕಾಕ ಗ್ಯಾರಂಟಿ
ಕೊಡ್ತದ॥

ಇತ್ತಿತ್ಲಾಗಿ ಅದೇನಾ ಕೊರೋನಾ ಅಂತ
ಸರ್ಕಾರದ ಆದೇಶ ಪಾಲಿಸಬೇಕಂತ
ಮಾಸ್ಕ್ ಹಾಕ್ಕೊಂಡು ಅಂತ್ರ ಕಾಯ್ಬೇಕಂತ
ಮಾಡೋಣ ಎಲ್ಲಕ್ಕಿಂತ ಜೀವ ದೊಡ್ಡದಲ್ಲ॥

– ಚಂದ್ರಶೇಖರಯ್ಯ ರೋಣದಮಠ

## ಮಾತಿನ ಗಿಣಿ

ಪುಟ್ಟದೊಂದು ಮಾತು ಕಲಿತ
ಗಿಣಿಯೊಂದ ಮುದ್ದಿನಿಂದ
ಸಾಕಿ ಹಣ್ಣುನೀರ ಕೊಟ್ಟು
ಚೆಂದದಿಂದ ಬೆಳಸಿದೆ

ಮಾತಿನಿಂದ ಕಲಿತ
ವಿಷಯ ಹೇಳಿ ಹಾಡಿ
ಕುಣಿದ..ಕುಪ್ಪಳಿಸಿ
ಕೆಂಪು.ಬಣ್ಣದ ಮೂತಿಯ
ಹಸಿರು ಬಣ್ಣದ ರೆಕ್ಕೆ
ಕಂಡು ಹಿರಿ ಹಿರಿ ಹಿಗ್ಗಿದೆ

ಬಣ್ಣದ ಅಂಗಿ ತೋಡಿಸಿ
ಅಂದದ ಹಾಡು ಕಲಿಸಿ
ಚೆಂದದ ಮಾತ ಕಲಿಸಿ
ಹೊರ ಜಗತ್ತ..ನೋಡಿ
ತಿಳಿಯಲು ಹೇಳಿ ಕಳಿಸಿದೆ

ಮರಳಿ ಬಂದ ಮುದ್ದು ಗಿಳಿ
ಜಗದ ಅಂದಕ್ಕೆ ಸೋತು
ಸಾಕಿದವಳ ಬಳಿಗೆ ಬಂದು
ಸುಂದರ ಬದುಕು ಕಾದಿದೆ
ದಾರಿ ಕಾಯಬೇಡ ಎನುತ
ತನ್ನ ದಾರಿ... ಹಿಡಿದು
ಹಾರಿಹೋಯಿತು

ಮಾತು ಬರುವ ಗಿಳಿಯೆಂದು
ಮುದ್ದಿನಿಂದ ಸಾಕಿದವಳ
ಪ್ರೀತಿಯಿನ್ನು ತೊರೆದು
ಜಗದ ಅಂದಕ್ಕೆ ಆಸೆ ಪಟ್ಟು
ಹೋಯಿತಲ್ಲ...ವೆಂದು ಮನದಿ
ಮರುಗಿದಳು.

– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ ಹಗರಿಗಜಾಪುರ

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹಳ್ಳದ ತೋಟ



ನನ್ನ ಬಗ್ಗೆ ನನಗೇ ಜಿಗುಪ್ಸೆ, ಒಂದು ರೀತಿಯ ವ್ಯಂಗೆ, ಒಂದು ರೀತಿಯಲ್ಲಿ ಇಮ್ಮೆಚೂರು ಅಂತಾರಲ್ಲ ಹಾಗೆ, ವಿವೇಕ ಶೂನ್ಯನಂತೆ ವರ್ತಿಸಿಬಿಟ್ಟೆನಲ್ಲ. ನನ್ನ ಬಗ್ಗೆ ನನ್ನ ವರ್ತನೆಯ ಬಗ್ಗೆ ನನ್ನಲ್ಲೇ ಇನ್ನಿಲ್ಲದಂತೆ ಮುಜುಗರ ಪಟ್ಟುಕೊಂಡು ನಗಬೇಕೋ ಅಳಬೇಕೋ ಒಂದೂ ತಿಳಿಯದಂತಾಗಿ, ಒಂದು ನಿಮಿಷ ಆ ಕತ್ತಲಲ್ಲಿ ಅಲುಗಾಡದಂತೆ ನಿಂತುಬಿಟ್ಟೆನಲ್ಲ! ಆವಾಗಲೆ ಆ ಕತ್ತಲು, ಆ ರಾತ್ರಿ ನನ್ನ ಪಾಲಿಗೆ ರಾತ್ರಿ ಅನಿಸಲೇ ಇಲ್ಲ, ಅದಕ್ಕೆ ನಾನು ರಾತ್ರಿ ಹೊತ್ತು ಹೊಲಕ್ಕೆ ಹೋಗೋದಿಲ್ಲ ಎಂದಿದ್ದು.

ಅಲ್ಲಾ ಇವರೀಗೇನು ದಾಡಿ ಸಂಜೆ ಹೊತ್ತಿಗೆ ಮನೆಗೆ ಬಂದು ಉಂಡುಕೊಂಡು, ಅಲ್ಲೇ ಉಳಿದುಕೊಂಡಿರೊ ಆಳುಕಾಳುಗಳಿಗೆ ಬುತ್ತಿ ಕಟ್ಟಿಕೊಂಡು ಹೋಗಬಹುದಲ್ಲ. ಮೊದಲೇ ನಮಗೆ ಭಯ, ಅದರಲ್ಲೂ ಆ ಹಳ್ಳದ ತೋಟಕ್ಕ ಹೋಗಬೇಕಂದರ? ಜನ ಹಗಲು ಹೊತ್ತಿನಲ್ಲೆ ಆ ಕಡೆ ಹೋಗಲಿಕ್ಕೆ ಹೆದರಿಕೊಳ್ಳುತ್ತಾರೆ, ಅಂತದರಲ್ಲಿ ನಮ್ಮಂತ ಹುಡುಗರ ಪಾಡು ಏನಾಗಬೇಡ? ಹಾಗಂತ ನಾನೇನು ಹೆದರ ಪುಕ್ಕನಲ್ಲ.

ಆ ದಿನ ದೈರ್ಯಮಾಡಿ ಸುಮಾರು ರಾತ್ರಿ ಒಂಬತ್ತು ಗಂಟೆ ಸಮಯದ ಆಸುಪಾಸು ಅನಿಸುತ್ತೆ, ಬೇಗ ಬೇಗ ಬುತ್ತಿ ಗಂಟು ಕಟ್ಟಿಕೊಡಬೇ ಅನ್ನೋದೇ ತಡ, ಆ ಕಡೆಯಿಂದ ತಮ್ಮಾ ಹುಷಾರು ನೆಟ್ಟಗ ದಾರಿ ಮಧ್ಯ ಬಡ ಬಡ ನಡಿದುಕೊಂಡು ಹೋಗು, ಸೈಡ್ ಗೆ ಹೋಗಬ್ಯಾಡ ಯಪ್ಪ ಹುಳ ಹುಪ್ಪಡಿ ಇರತಾವು.

ಈತನಿಗಾದ್ರು ಎಷ್ಟುಬಾರಿ ಹೇಳೋದು, ಆ ಹುಡಗನನ್ನು ಶಾಲಿ ಬಿಡಿಸಿ ಹೊಲಕ್ಕ ಕರಕೊಂಡು ಹೋಗಬ್ಯಾಡ ಅಂತ, ಹೊತ್ತಿಲ್ಲದ ಹೊತ್ತಿನ್ಯಾಗ ಹೀಂಗ ಕರದ್ರಾ, ಅಲ್ಲಾ ನಾಳೆ ಹುಡುಗನಿಗೆ ಏನಾದ್ರು ಅನುವು ಆಪತ್ತು ಆದ್ರ ಏನು ಮಾಡ್ತಾರ? ತಗೊ ನನಗಂತು ಹೇಳಿ ಹೇಳಿ ಸಾಕಾಗ್ಯೆತಿ, ಯಾರ ಮಾತು ಕೇಳತಾನು ಹೇಳು ನಿಮ್ಮಪ್ಪ, ನೀನು ಅಪ್ಪನ ಮಗನೇ ಅಲ್ವೆ, ಹೋಗು ಬೇಗನೆ ಹೋಗಿ ಬುತ್ತಿಕೊಟ್ಟು ಬಾ, ಇಲ್ಲಾ ಅಲ್ಲೇ ಮಕ್ಕೊಂಡು ಮುಂಜಾನೆ ಎದ್ದು ಬಾ, ನಾಳೆ ಶನಿವಾರ ಬೆಳಗ್ಗೆನೇ ಶಾಲಿ ಬೇರೆ ಐತಿ ಅಂದವಳೆ ನನ್ನ ಕೈಗೆ ಬುತ್ತಿ ಗಂಟು ಕೊಟ್ಟಳು.

ಆಯ್ತು ಆಯ್ತು ಅಂದುಕೊಳ್ಳುತ್ತಾ ನಾನು ಮನೆಯಿಂದ ನೇರವಾಗಿ ಅಗಸಿಬಾಕಲಿನಿಂದ ಜಾರುಗಲ್ಲು ಇಳಿದುಕೊಂಡು, ತೇರುಗಡ್ಡಿಯ ಮುಂದಾಸಿ ಕುರಬರ ಓಣಿ ಮುಕಾಂತರ ಊರ ಹೊರಗಿನ ಬನ್ನಿ ಕಟ್ಟಿಯ ಹತ್ತಿರ ಬಂದು ನಿಂತೆ. ಏನೋ ಒಂದು ತರಹ ಭಯ ಸಮಯ ರಾತ್ರಿ ಹತ್ತರ ಅಂದಾಜು, ಬೇರೆ ದಾರಿ ಇಲ್ಲ, ಹೋಗಲೇ ಬೇಕು ಇಲ್ಲ ಅಂದ್ರೆ ಅಲ್ಲಿ ಅಪ್ಪನಿಗೆ ಹೊಟ್ಟೆಗೆ ಹಿಟ್ಟಿಲ್ಲ, ಪಾಪ ಮುಂಜಾನೆಯಿಂದ ರಾತ್ರಿ ತನಕ ಜೀತಕಿಟ್ಟಿರೊ ಎತ್ತಿನ ಹಾಗೆ ಬಿಸಿಲಿನಾಗ ದುಡಿತಾನ, ರಾತ್ರಿ ಮನೆಗೆ ಬಂದ್ರ ಎಲ್ಲಿ ಕೆಲಸ ಮುಗಿಯೋದಿಲ್ಲ ಅಂದುಕೊಂಡು ಅಲ್ಲೇ ಇರುತಾನ, ಮೇಲಾಗಿ ಕಳ್ಳರ ಕಾಟ ಬೇರೆ, ರಾಶಿ ರಾಶಿನೇ ರಾತ್ರಿ ಬೆಳಗಾಗೊದ್ರಲ್ಲಿ ನಾಪತ್ತೆ ಮಾಡಿಬಿಡ್ತಾರೆ!

ಕಳ್ಳರಿಗೇನು ಗೊತ್ತು ಕಸರತ್ತಿನ ಬದುಕ ಅಂದುಕೊಳ್ಳುತ್ತಾ ಕರೇಬೆಟ್ಟಪ್ಪನವರ ಹೊಲ ತಡಾದು, ನಮ್ಮೂರ ಸಾಬರ ಸ್ಮಶಾನ ಪಕ್ಕದಗಾಸಿ ಬಿರುಸಿನಿಂದ ಹೆಜ್ಜೆ ಹಾಕುತಿದ್ದೆ. ಸಡನ್ನಾಗಿ ಏಕದಮ್ ಕಲ್ಲಿಂಗಮ್ಮನ ಹುಣಸೆ ಮರದ ನೆನಪಾಯ್ತು ಇನ್ನೇನು ಬಲಕ್ಕೆ ತಿರಿಗಿದರ ಅದೇ ಕಣ್ಣಿಗೆ ಕಾಣ್ತಿತ್ತು!. ಈ ಹುಣಸೆ ಮರದ ಬಗ್ಗೆ ಮೊದಲಿನಿಂದಲೂ ನಮಗೆಲ್ಲ ಕುತೂಹಲ ಈ ಮರದ ಇರುವಿಕೆಯನ್ನ ನನ್ನ ಅಜ್ಜನ ಅಪ್ಪ ರುದ್ರಗೌಡ್ರು ನಮ್ಮಜ್ಜ ಕೊಟ್ರಬಸಪ್ಪನಿಗೆ ಹೇಳುತಿದ್ದರಂತೆ, ನಮ್ಮಪ್ಪನಿಗೆ ಆಗಾಗ ನಮ್ಮಜ್ಜ ಹೇಳುತ್ತಿದ್ದುದ್ದನ್ನು ನಾನು ಕೇಳಿದ್ದೆ.

ಈ ಕಲ್ಲಿಂಗಮ್ಮನ ಹುಣಸೆ ಮರ ಆ ದಿನಗಳಿಂದಲೂ ಅದೇ ರೀತಿಯ ನಂಬುಗೆ ಮತ್ತು ವಿಶ್ವಾಸವನ್ನು ಆ ದಾರಿಯಲ್ಲಿ ಹಾದು ಹೋಗುವ ಎಲ್ಲ ಕುಟುಂಬಗಳಲ್ಲಿ ಇನ್ನೂ ಹಾಗೆಯೇ ಉಳಿಸಿಕೊಂಡು ಬಂದಿದೆ. ಅದಕ್ಕೊಂದು ಹಿನ್ನೆಲೆ ಇದೆ, ಒಂದು ಬಾರಿ ಮಳೆಗಾಲದಲ್ಲಿ ಬಾರಿ ಮಳೆಯಾಗಿ ಆ ಮರದ ಮುಂದಿನ ತಿರುವಿನಲ್ಲಿರುವ ಹಳ್ಳ ತುಂಬಿ ಹರಿಯುತ್ತಿರುವಾಗ ಒಂದು ರೈತ ಕುಟುಂಬ ಇನ್ನೇನು ರಾತ್ರಿ ಯಾಗುತ್ತಿರುವಾಗ ತನ್ನ ಹೊಲದ ಕೆಲಸವನ್ನಲ್ಲಾ ಮುಗಿಸಿಕೊಂಡು ಎತ್ತಿನ ಗಾಡಿಯೊಂದಿಗೆ ಅಲ್ಲಿಗೆ ಬಂದು ಆ ತುಂಬಿ ಹರಿಯುತ್ತಿದ್ದ ಹಳ್ಳವನ್ನು ದಾಟುಲು ಪ್ರಯತ್ನ ಮಾಡುತಿದ್ದಾಗ, ಆ ನೀರಿನ ಸೆಳವಿನ ರಬಸಕ್ಕೆ ಸಿಕ್ಕ ಆತನ ಚಕ್ಕಡಿ, ಎತ್ತುಗಳ ಸಮೇತವಾಗಿ ನೀರಿನಲ್ಲಿ ತೇಲಿಹೋಗುತಿದ್ದಾಗ, ಆ ರೈತ ಕುಟುಂಬದ ರಕ್ಷಣೆಯನ್ನು ಯಾರು ಒಂದು ಹೆಂಗಸು ಬಂದು ಅನಾಮತ್ತಾಗಿ ಯಾವುದೇ ತೊಂದರೆಯಾಗದಂತೆ ಎತ್ತುಗಳ ಸಮೇತವಾಗಿ ಬಂಡಿಯನ್ನು ಆಚೆಗಿನ ದಡಕ್ಕೆ ಸೇರಿಸಿದಳಂತೆ! ಯಾರು ತಾಯಿ ನೀನು, ಇಷ್ಟೊಂದು ತಡ ರಾತ್ರಿಯಲ್ಲಿ ಇಲ್ಲಿಗೇಕೆ ಬಂದಿದ್ದೀಯ ಮತ್ತು ನಮ್ಮನ್ನೇಕೆ ಕಾಪಾಡಿದೆ? ಎಂದು ಕೇಳಿದ್ದಕ್ಕೆ ಆ ಹೆಣ್ಣು ಮಗಳು ನಾನು ಇಲ್ಲಿಯೇ ಇರುತ್ತೇನೆ ನನ್ನ ಹೆಸರು ಕಲ್ಲು ನಿಂಗವ್ವ ಎಂದಳಂತೆ! ಅಷ್ಟೆ ಆ ಕ್ಷಣಕ್ಕೆ ಅವರು ಅಲ್ಲಿಂದ ಹೊರಟು ಹೋದರಂತೆ!

ಈಗ ನನ್ನ ಸರತಿ ಅದೇ ಮರದ ಎದುರಿಗೆ ನಾನು ನಿಂತಿದ್ದೆ, ಮನಸ್ಸಿನಲ್ಲಿ ಒಂದು ರೀತಿಯ ದುಗಡ, ದೈರ್ಯ ಎಲ್ಲವೂ ಮೇಳವೈಸಿತ್ತು. ಮನಸ್ಸಿನಲ್ಲೇ ಕಾಪಾಡು ತಾಯಿ ಅಂದುಕೊಂಡು, ಉಗುಳು ನುಂಗಿಕೊಳ್ಳುತ್ತಾ ಮುಂದಡಿ ಇಟ್ಟೆ. ಸುಂಯ್.... ಸುಂಯ್..... ಎಂದು ಗಾಳಿ ಬೀಸುತಿತ್ತು, ದೂರ ದೂರದಲ್ಲಿ ನರಿಗಳು ಕೇಕೆ ಹಾಕುತಿದ್ದವು, ಕಾಡು(ಕುಲ್ಡ) ನೊಣಗಳು ಚಿರ್ ..ರ್.. ಎನ್ನುವುದು ಒಂದು ಕಡೆಯಾದರೆ,ಆಗಾಗ ಇದ್ದಕಿದ್ದಂತೆ ಒಂದು ಎಲೆಯೂ ಮಿಸುಕಾಡಾದಂತೆ ನೀರವ ಮೌನ ಆವರಿಸಿಬಿಡುತಿತ್ತು, ನನ್ನ ಹೆಜ್ಜೆಯ ಸಪ್ಪಳ ಸಹ ನನಗೆ ಸ್ಪಷ್ಟವಾಗಿ ಕೇಳುತಿದ್ದವು! ಆ ಸನ್ನಿವೇಶ ನನ್ನ ಎದೆ ಬಡಿತದ ನಗಾರಿಯನ್ನು ಇನ್ನಿಲ್ಲದಂತೆ ಬಾರಿಸಿತಿತ್ತು. ಅಗಾಗ ಪಕ್ಕದಲ್ಲೆ ಸರಕ್ಕನೆ ಸರಿಯುತಿದ್ದ ಹಾವರಾಣಿ, ಓತಿಕಟಗಳ ಶಬ್ದ ಎದೆಯಲ್ಲಿ ಪಟಾಕಿ ಹಾರಿಸಿದಂತೆ ಜಲ್ ಎನಿಸಿತಿತ್ತು.

ಇನ್ನೇನು ಅದೋ ಆ ಬನ್ನಿ ಕಾಳಮ್ಮನ ಮರವನ್ನು ದಾಟಿ, ಹಳ್ಳದ ತೋಟದಿಂದ ಬರುತಿದ್ದ ದೊಡ್ಡ ಕಲೇವು(ಕಾಲುವೆ) ಹತ್ತಿ ಬಿಟ್ಟರೆ ನಮ್ಮ ಹೊಲ ಬಂದೇ ಬಿಡುತ್ತದೆ ಅಂದುಕೊಳ್ಳುತ್ತ ಕಾಲುಗಳು ತಮ್ಮ ವೇಗವನ್ನು ಹೆಚ್ಚಿಸಿಕೊಂಡಿದ್ದವು. ಆಗಾಗ ನನ್ನ ಕಾಲುಗಳನ್ನು ನಾನೆ ತೊಡರಿಸಿಕೊಂಡು ಜೋಲಿ ಹೊಡೆಯುತಿದ್ದದ್ದು ನನ್ನ ಮನಸ್ಸಿನ ಗೊಂದಲಕ್ಕೆ ಸಾಕ್ಷಿಯಾಗಿತ್ತು.

ಒಂದು ಕ್ಷಣ ಬೀಸುವ ಗಾಳಿ ಸಂಪೂರ್ಣ ನಿಂತಿತು! ಕಗ್ಗತ್ತಲು ಬೇರೆ, ಯಾರೋ ನನ್ನ ಹಿಂದೆ ನನ್ನನ್ನೇ ಹಿಂಬಾಲಿಸಿದಂತೆ ಬಾಸವಾಗುತಿತ್ತು, ತಿರಿಗಿ ನೋಡಲು ಮನಸ್ಸು ಒಪ್ಪುತ್ತಿಲ್ಲ, ಜೋರಾಗಿ ಕೂಗಬೇಕಂದರೆ ಗಂಟಲಿನಿಂದ ಶಬ್ದಾನೆ ಬರುತ್ತಿಲ್ಲ! ಗಂಟಲು ಒಣಗಿ ಉಗುಳು ನುಂಗುವುದು ಕಷ್ಟವಾಗಿದೆ, ಮನೆಯ ಜಗುಲಿಯ ಮೇಲಿರುವ ಎಲ್ಲಾ ದೇವರುಗಳ ನಾಮಸ್ಮರಣೆ ಮನಸ್ಸಿನಲ್ಲಿ ತಾನಾಗಿಯೇ ನೆಡೆದಿತ್ತು, ದೈರ್ಯ ಮಾಡಿ ಹಿಂದಕ್ಕೆ ತಿರುಗಿದೆ! ಅಪ್ಪಾ ಎನೂ ಇಲ್ಲ, ಸ್ವಲ್ಪ ನೀರಾಳವಾಯ್ತು, ಆ ತಂಪಾದ ಸುಳಿಗಾಳಿಯಲ್ಲೂ ಬೆವರಿನ ಹನಿಗಳು ಮೂಡಿದ್ದು ನೋಡಿದರೆ ಅವು ನಮ್ಮ ದೈರ್ಯಕ್ಕೆ ಅಣಕವಾಡುತಿದ್ದದ್ದು ಸ್ಪಷ್ಟವಾಗಿತ್ತು.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಸರಿ ಇನ್ನೇನು ಕಲೇವು ಇಳಿದು ಹತ್ತಿದರೆ ನಮ್ಮ ಹೊಲ ಅಲ್ವೇ? ಅಂದುಕೊಂಡು ಜೋರಾಗಿ "ಯಾರು ಏನು ಮಾಡುವರು....... ನನಗೇನು ಕೇಡು ಮಾಡವರು....." ಹಾಡು ಹಾಡುತ್ತಾ ಹೊರಟೆ ಅದೇನೊ ಯಾರೂ ಇಲ್ಲದಾಗ, ಇಲ್ವೆ ನಮಗೆ ಭಯ ಆದಾಗ ಈ ರೀತಿ ಜೋರಾಗಿ ಹಾಡುವುದರಿಂದ ನಮ್ಮ ಮನಸ್ಸಿನಲ್ಲಿ ಒಂದು ತರಹದ ಸಮಾದಾನ ಅಲ್ವೆ? ತಕ್ಷಣ ನನ್ನ ಪಂಚೇಂದ್ರಿಯಗಳು ಜಾಗೃತವಾದವು! ನೋ ಡೌಟ್, ಸ್ವಲ್ಪ ಮೈಂಡ್ ಜಾಗೃತವಾಯಿತು, ಬುದ್ದಿಗೆ ಚುರುಕು ಮುಟ್ಟಿಸಿ ಲಾಜಿಕ್ ಕೆಲಸ ಶುರು ಮಾಡಿತ್ತು! ಪಕ್ಕಾ ಅಲ್ಲಿ ಯಾರೋ ಇದ್ದಾರೆ! ಒನ್ ಹಂಡ್ರೆಡ್ ಪರ್ಸೆಂಟ್, ಸಮ್ ಬಡಿ ಈಜ್ ದೇರ್.....!

ಈ ದಿವಸ ಎರಡರಲ್ಲಿ ಯಾವುದಾದರು ಒಂದು ಆಗೇ ಬಿಡಲಿ ಅಂದುಕೊಂಡವನೆ, ದೈರ್ಯ ಮಾಡಿ ನಿರ್ಧರಿಸೇ ಬಿಟ್ಟೆ. ಅವನು ಯಾವನಾದರು ಆಗಲಿ ಇವತ್ತು ಅವನಿಗೆ ಬುದ್ದಿ ಕಲಿಸೋದೆ. ಏಕೆಂದರೆ ಕೂಗಳೆತೆಯಲ್ಲೆ ನಮ್ಮ ಹೊಲ, ಏನಾದರು ಹೆಚ್ಚು ಕಡಿಮೆಯಾದರೆ ಒಂದು ಕೂಗು ಅಷ್ಟೆ, ನಮ್ಮಪ್ಪ ಬಂದೇ ಬಿಡುತ್ತಾನೆ ಎನ್ನುವ ಹುಂಬು ದೈರ್ಯ ಅದು. ಇಷ್ಟೆಲ್ಲ ಯೋಚಿಸುತಿದ್ದಾಗಲೆ ಅವನು ಹುಷಾರ್ ಆದ ಕಾಣುತ್ತೆ, ಮೈ ತುಂಬಾ ಶಾಲು ಹೊದ್ದು ಕೊಂಡಿರಬಹುದು ಅರೆ ಬರೆಯಾಗಿ ಕಾಣಿಸುತ್ತಿದೆ, ಕತ್ತಲು ಬೇರೆ, ಚಳಿಯ ಹೊಡೆತಕ್ಕೆ ಹಚ್ಚಿಕೊಂಡಿದ್ದ ಬೀಡಿಯನ್ನು ನನ್ನ ನೋಡುತ್ತಲೇ ಆರಿಸಿ ಹೊಸಕಿ ಹಾಕಿದ ಅನ್ಸುತ್ತೆ, ಏಕೆಂದರೆ ಅಲ್ಲಿ ಪಳಕ್ಕನೆ ನಂದಿಹೋದ ಬೆಳಕಿನ ಮರ್ಮ ನನಗೆ ಸ್ಪಷ್ಟವಾಗಿತ್ತು! ಒಂದಿಂಚೂ ಕದಲುತ್ತಿಲ್ಲ ಎಲ್ಲಿ ನನಗೆ ಗೊತ್ತಾಗಿ ಬಿಡುತ್ತದೆ ಎಂದುಕೊಂಡಿರಬೇಕು! ನಾನು ಅಷ್ಟೆ ಅಲ್ಲೇ ನಿಂತೆ ಸ್ವಲ್ಪ ಯೋಚಿಸಿದೆ.

ಅವನು ಸ್ವಲ್ಪ ಕದಲಿದ ಆ ಕತ್ತಲಲ್ಲಿ ನನ್ನ ಕಣ್ಣುಗಳು ತಮ್ಮ ಚುರುಕುತನವನ್ನು ಸಾಬೀತು ಮಾಡಿದ್ದವು. ನಾನು ಸುಮ್ಮನೆ ಕೆಮ್ಮಿದೆ, ಅವನು .... ಏನೂ ಇಲ್ಲ ನಿರುತ್ತರ. ನಾನೇ ಮುಂದಡಿಯಾಗಿ, ಸ್ವಲ್ಪ ದೈರ್ಯ ಮಾಡಿ ನನಗೇನು ಹೆದರಿಕೆ ಇಲ್ಲ ಎನ್ನುವುದನ್ನು ಅವನಿಗೆ ಗೊತ್ತು ಮಾಡಲು ಮತ್ತೊಮ್ಮೆ ಕೆಮ್ಮಿದೆ! ಆ ಕಡೆಯಿಂದ ಏನೂ ಉತ್ತರವಿಲ್ಲ, ಇದೇಕೋ ಅತಿ ಎನಿಸಿತು ನನಗೆ, ಹೀಗೆ ಬಿಟ್ಟರೆ ರಾತ್ರಿ ಪೂರ್ತಿ ಇವನು ಇದೇ ಆಟ ಆಡುತ್ತಾನೆ ಅಂದುಕೊಂಡು, ಏನಪಾ ಈಗ? ಮರ್ಯಾದಿಯಿಂದ ಮಾತಾಡ್ತಿಯೋ ಇಲ್ಲಾ ನಾನೆ ಮಾತನಾಡಿಸಲೊ...., ಆ ಕಡೆಯಿಂದ ನಿರುತ್ತರ! ಎಲಾ ಇವನಾ.. ಮಯ್ಯಾಗ ಸಣ್ಣಗ ಕಡಿತಾ ಇದೆ ಏನು? ಇದೇ ನಮ್ಮ ಹೊಲ ನಮ್ಮಪ್ಪ, ಜೊತೆಗೆ ನಾಲ್ಕು ಜನ ರಾಶಿ ಮಾಡ್ಲಿಕತ್ಯಾರ ಅವರನ್ನು ಕರೆಯಬೇಕೇನು? ಎಂದು ಸ್ವಲ್ಪ ಏರು ಧ್ವನಿಯಲ್ಲಿ ವಿಚಾರಿಸಿದೆ. ಆದರೂ ಮಾತನಾಡಲಿಲ್ಲ ಈ ಅಸಾಮಿ! ಎಲಾ ಇವನಾ!? ಇವನನ್ನು ಹೀಗೆ ಕೇಳಿದರೆ ಬಾಯಿ ಬಿಡಂಗಿಲ್ಲ.

ಇದಕ್ಕ ಏನಾದರೊಂದು ಐಡಿಯಾ ಮಾಡಬೇಕಲ್ಲ ಅಂದುಕೊಂಡವನೆ ತಡಮಾಡದೆ ರಸ್ತೆಯ ಪಕ್ಕದಲ್ಲೇ ಬಿದ್ದಿದ್ದ ಎರಡು ಕಲ್ಲನ್ನು ತೆಗೆದುಕೊಂಡು, ಈಗ ಹೇಳು ಮಗನೆ ಏನು ಬೇಕು ನಿನಗೆ (ಆಗಲೆ ಅವನ ಮೇಲೆ ನಮಗೆ ಸ್ವಲ್ಪ ಮರ್ಯಾದಿ ಕಡಿಮೆಯಾಗಿತ್ತು) ನಾಟಕ ಮಾಡ್ಲಿಕತ್ತಿದ್ದೀಯ. ಬೋಸುಡಿಕೆ ಸಣ್ಣವ ಅದಾನ ಹೆದರಸಬಹುದು ಅಂದುಕೊಂಡೀಯ? ಮಗನ ಎದ್ದು ಮುಂದಕ ಬಾ .. ಇಲ್ಲಾ ... ಇಗೋ ಇಲ್ಲಿ ನೋಡು ಮಗನಾ ಕೈಯಾಗ ಕಲ್ಲು ಹೇಗೆ ಇವೆ ಎಂದು, ಒಂದು ಬಿಟ್ಟರ ಸಾಯ್ತಿ ಮಗನೆ ಎಂದವನೆ ಕಲ್ಲನ್ನು ಎಸೆಯಲು ಅಣಿಯಾಗುವಂತೆ ಸೆಟೆದು ನಿಂತೆ. ಇವನೆಂತ ಹೊಪ್ಲೆಸ್ಸೊ ಇಷ್ಟಾದರು ಸ್ವಲ್ಪವೂ ಕದಲಲಿಲ್ಲ.

ನನ್ನ ಸಿಟ್ಟು ನೆತ್ತಿಗೇರಿತ್ತು ಇವನೆಂತ ಮಂಗ್ಯಾನ ಮಗನೊ.. ಇಷ್ಟಾದರೂ ಒಂಚೂರು ಮಿಸಗಾಡತಿಲ್ಲ, ಮಗನೆ ನಿನಗಿದು ಕೊನೆ ಚಾನ್ಸ್ ಮೂರು ಎಣುಸುತೀನಿ ಅಷ್ಟರೊಳಗೆ ಎದ್ದು ಬಂದಿ ಉಳುಕೊಂತೀಯ ಇಲ್ಲಾ ನಿನ್ನ ತಲೆಯ ಪೋಟಿ ಹಾರತದೆ ಮಗನೆ, ಒಂದೊ.....! ಎರಡೋ....!!, ಮೂರೋ.....!!! ಸಾಯಿ ಮಗನೆ ಅಂದವನೆ ನನ್ನ ಶಕ್ತಿ ಎಷ್ಟೈತಿ ಅಷ್ಟುನ್ನು ಒಂದು ಮಾಡಿ, ಹಿಂದಕ್ಕ ಕೈ ಎಳೆದು ಕಲ್ಲು ಎಸ್ದೆ ನೋಡು.....! ಟಪ್.. ಟಪ್........ ಅನ್ನುವ ಶಬ್ದ ಕಿವಿಗೆ ಚಟಾರನೆ ಬಡಿದಂಗ ಆಯ್ತು, ಆ ಕತ್ತಲಲ್ಲೂ ಪಳಕ್ಕ ಎಂದು ಕಿಡಿಯೊಂದು ಹಾರಿತು....!!? ಒಂದು ಕ್ಷಣ ದಿಗ್ಭ್ರಾಂತು! ಏನಾಯಿತು ಅನ್ನುವುದು ತಿಳಿಯೊ ಹೊತ್ತಿಗೆ ನನಗೆ ನನ್ನನ್ನೆ ನಿಯಂತ್ರಣ ಮಾಡಿಕೊಳ್ಳಲಿಕ್ಕೆ ಆಗದಷ್ಟು ನಗೆ ಉಕ್ಕಿ ಬಂದಿತ್ತು, ಒಂದು ಕ್ಷಣ ಉಫ್.... ಅಂದುಕೊಂಡು ಅಲ್ಲೆ ದಾರಿಯಲ್ಲಿ ಕುಳಿತುಬಿಟ್ಟೆ!.

ಪ್ರತಿ ನಿತ್ಯ ಅದೆ, ಅದೇ ಆ ದಾರಿ ಬದಿಯಲ್ಲಿ ಇರುವ ಲಿಂಗಮುದ್ರೆ ಕಲ್ಲಿನ ಮೇಲೆ ಕುಳಿತೆ ವಿಶ್ರಾಂತಿ, ಹರಟೆ ಕೊನೆಗೆ ಸೀಜನ್ನಿನಲ್ಲಿ ಹುಣಿಸೆ ಚಿಗುಳಿ ಕುಟ್ಟುತಿದ್ದಿದ್ದೂ ಅದರ ತಲೆಯ ಮೇಲೆಯೇ! ಆವಾಗಲೆ ಒಂದು ತರಹದ ಜಿಗುಪ್ಸೆ, ಮುಜುಗರ, ನನ್ನ ನಿಯಂತ್ರಣ ತಪ್ಪಿ ನಕ್ಕ ರಾತ್ರಿ ಅದು ಹ್ಹ ಹ್ಹಹ್ಹ... ಹ್ಹ ಹ್ಹ್ ಹ್ಹ್............ .

ಎಲಾ ಇವನಾ ಇವನಿಗೇನಾಯ್ತು ಹಿಂಗ್ಯಾಕ ನಗಲಿಕತ್ತಿಯಾ? ಕನಸು ಬಿದ್ದಿರಬೇಕು ಮುಂಡೇದಕ್ಕೆ, ಏಳು ಏಳು ಗಂಟೆ ಏಳು ಆಯಿತು, ಇವತ್ತು ಶನಿವಾರ ಬೆಳಗಿನ ಶಾಲೆ ನೆನಪು ಐತೊ ಇಲ್ಲೊ ಅಂದಕೊಳ್ಳುತ್ತಾ ಹೊರಗಡೆ ಹೊದಳು ನಮ್ಮವ್ವ.

## ಹೊಸಪೇಟೆಯಲ್ಲಿ ಅಧಿಕಾರಿಗಳಿಂದ ಮತದಾನ ಜಾಗೃತಿ

# ಮೇಣದ ಬತ್ತಿ, ಪಂಜಿನ ಮೆರವಣಿಗೆ

### ಜಿಪಂ ಸಿಇಓ ಸದಾಶಿವ ಪ್ರಭು ಹೇಳಿಕೆ | ಮತದಾನದಿಂದ ಹೊರಗುಳಿಯಬೇಡಿ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದಲ್ಲಿ ಬರುವ ಮತಗಟ್ಟೆಯ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ಶೇಕಡವಾರು ಮತದಾನ ಹೆಚ್ಚಳಗೊಳಿಸಬೇಕು ಎಂದು ಜಿಪಂ ಸಿಇಓ ಸದಾಶಿವ ಪ್ರಭು ಹೇಳಿದರು.

ನಗರದಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆ – 2024 ರ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಪಂಚಾಯತ್ ವಿಜಯನಗರ, ಹಾಗು ನಗರಸಭೆ, ಹಾಗು ಹೊಸಪೇಟೆ ತಾಲೂಕು ಸ್ವೀಪ್ ಸಮಿತಿ ವತಿಯಿಂದ ಶನಿವಾರ ಸಂಜೆ ಹಮ್ಮಿಕೊಂಡಿದ್ದ "ಮೇಣದ ಬತ್ತಿ ಹಾಗೂ ಪಂಜಿನ ಮೆರವಣಿಗೆ ಮೂಲಕ ಮತದಾನದ ಜಾಗೃತಿಗೆ ಚಾಲನೆ ನೀಡಿ ಮಾತನಾಡಿದರು. ಮತದಾನವೆಂಬುದು ಸಂವಿಧಾನ ಬದ್ದವಾದ ನಮ್ಮ ಹಕ್ಕು, ಲೋಕಸಭಾ ಚುನಾವಣೆಯಲ್ಲಿ ಮೇ– 07 ರಂದು ತಮ್ಮ ತಮ್ಮ ಮತಗಟ್ಟೇಗೆ ಹೋಗಿ ತಪ್ಪದೇ ಕಡ್ಡಾಯವಾಗಿ ಮತ ಚಲಾಯಿಸಬೇಕು, ಪ್ರಜಾಪ್ರಭುತ್ವದಲ್ಲಿ ಮತದಾನ ಪವಿತ್ರವಾಗಿದ್ದು ಮತದಾರರು ಯಾವುದೇ ಆಸೆ ಅಮಿಷಗಳಿಗೆ ಒಳಗಾಗದೇ, ಪ್ರಜಾಪ್ರಭುತ್ವದ ಭದ್ರ ಬುನಾದಿಗಾಗಿ ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಿ, ಮತದಾನದಿಂದ ಯಾರು ಸಹ ಹೊರಗುಳಿಯಬಾರದು ಎಂದರು. ಈ ಸಂದರ್ಭದಲ್ಲಿ ನಗರದ ಅಂಬೇಡ್ಕರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ಮತದಾನ ಜಾಗೃತಿ ಮೂಡಿಸಲಾಯಿತು.




ಯೋಜನಾ ನಿರ್ದೇಶಕರಾದ ಶ್ರೀ ಅಶೋಕ.ಜಿ ತೋಟದ್ ರವರು, ಹಾಗೂ ಹೊಸಪೇಟೆ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿ ಹರೀಶ, ಜಪಂ ಯೋಜನಾ ಮೌಲ್ಯಮಾಪನ ಅಧಿಕಾರಿ ಪತ್ರಿಬಸಪ್ಪ, ನಗರಸಭೆಯ ಆರತಿ ಹಾಗು ಶಮೀಮ್ ಬಾನು, ಹಾಗು ಫಾಜಿಲ್, ಪ್ರಸನ್ನ ಕುಮಾರ್, ನಾಗರಾಜು, ಪಾಜಿಲ್, ಕೊಟ್ರೇಶ, ತಾಲ್ಲೂಕಿನ ಗ್ರಾಮ ಪಂಚಾಯತಿ ಒಕ್ಕೂಟದ ಸ್ವ ಸಹಾಯ ಸಂಘಗಳ ಸದಸ್ಯರುಗಳು ಹಾಗು ನಗರಸಭೆಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್, ಸಿಬ್ಬಂದಿಗಳು ಭಾಗವಹಿಸಿದ್ದರು.

## ಅಮಾನತ್ತುಗೊಂಡ ಶಿಕ್ಷಕರ ಸ್ಥಳನಿಯುಕ್ತಿಗೆ ಆಯುಕ್ತರಿಗೆ ಮನವಿ

■ ಹಂಪಿ ಟೈಮ್ಸ್ ಕೊಪ್ಪಳ

ಸಾರ್ವಜನಿಕರ ದೂರು ಮತ್ತು ಕರ್ತವ್ಯಲೋಪದಡಿಯಲ್ಲಿ ಅಮಾನತ್ತುಗೊಂಡ ಶಿಕ್ಷಕರ ಅಮಾನತ್ತು ತೆರವುಗೊಳಿಸಿ, ಸ್ಥಳ ನಿಯುಕ್ತಿಗೊಳಿಸಲು ಮಾರ್ಗದರ್ಶನ ನೀಡುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳಾದ ಶ್ರೈಶೈಲ ಬಿರಾದಾರ ಅವರು ಇಲಾಖೆಯ ಆಯುಕ್ತರಿಗೆ ಮನವಿ ಮಾಡಿದ್ದಾರೆ.

ಸಾರ್ವಜನಿಕರ ದೂರು ಮತ್ತು ಕರ್ತವ್ಯಲೋಪದಡಿಯಲ್ಲಿ ಆಡಳಿತಾತ್ಮಕ ಹಿತ ದೃಷ್ಟಿಯಿಂದ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಕೇಸೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಭಾರತಿ ಭಟ್ ಅವರನ್ನು ದಿನಾಂಕ: 21–12–2023 ರಂದು ಹಾಗೂ ಗಂಗಾವತಿ ತಾಲ್ಲೂಕಿನ ಸಂಗಾಪುರದ ಶ್ರೀರಂಗದೇವರಾಯಲು ನಗರದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕಿಯಾದ ಪುಷ್ಪಾವತಿ ಎನ್. ಮತ್ತು ಸಹಶಿಕ್ಷಕರಾದ ಶರಣಬಸವರಾಜ ಅವರನ್ನು ದಿನಾಂಕ: 04–04–2024 ರಂದು ಅಮಾನತು ಮಾಡಲಾಗಿತ್ತು.

ಅಮಾನತ್ತುಗೊಂಡ ಶಿಕ್ಷಕರನ್ನು ಅಮಾನತು ವಿಚಾರಣೆ ಕಾಯ್ದಿರಿಸಿ ಕರ್ತವ್ಯಕ್ಕೆ ಪುನರಸ್ಥಾಪನೆ ಹಾಗೂ ಸ್ಥಳ ನಿಯುಕ್ತಿಗೊಳಿಸಿ ತಂತ್ರಾಂಶದಲ್ಲಿಯೇ ಖಡ್ಡಾಯವಾಗಿ ಮಾಹಿತಿಯನ್ನು ಇಂಡೀಕರಿಸಬೇಕಿರುವುದರಿಂದ 2023–24ನೇ ಸಾಲಿನ ಶಿಕ್ಷಕರ ವಾರ್ಗವಣೆ ಪ್ರಕ್ರಿಯೆ ಮುಕ್ತಾಯದವರೆಗೂ ಪ್ರಸ್ತುತ ಅಮಾನತುಗೊಂಡಿರುವ ಶಿಕ್ಷಕರುಗಳ ಅಮಾನತು ತೆರವುಗೊಳಿಸಿ ಸ್ಥಳನಿಯುಕ್ತಿಗೊಳಿಸುವ ಕುರಿತು ಅನುಮತಿ ಹಾಗೂ ಮಾರ್ಗದರ್ಶನ ನೀಡುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿದ್ದು, ಆಯುಕ್ತರಿಂದ 2–3 ದಿನಗಳಲ್ಲಿ ಅನುಮತಿ ಬರುವುದು. ಅನುಮತಿ ಬಂದ ಕೂಡಲೇ ಶಿಕ್ಷಕರುಗಳ ಅಮಾನತು ತೆರವುಗೊಳಿಸಿ ಸೇವೆಗೆ ಪುನರಸ್ಥಾಪಿಸಲಾಗುವುದು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಹಂಪಿ ಟೈಮ್ಸ್
HAMPI TIMES

## ಪ್ರಜಾಪ್ರಭುತ್ವದ ಗೆಲುವಿಗೆ ಮತದಾನದ ಹಕ್ಕು ಚಲಾಯಿಸಿ

### ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**05–05–2024 – ಭಾನುವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಭಾದ್ರಪದ |
| ಯೋಗ | : ವೈಧೃತಿ |
| ಕರಣ | : ವಿಷ್ಕುಂಭ |
| ಸೂರ್ಯೋದಯ | : 05:52:13 |
| ಸೂರ್ಯಾಸ್ತ | : 18:55:15 |
| ರಾಹು | : 17:17–18:55 |
| ಯಮಘಂಡ | : 12:24–14:02 |
| ಗುಳಿಕ | : 15:40–17:17 |

### ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 04–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.94 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 138 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.548 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1575.67 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 119 ಕ್ಯುಸೆಕ್ |
| ಸಾಮರ್ಥ್ಯ | 2.714 ಟಿಎಂಸಿ |

## ಮೇ 10 ರಂದು ಬಸವ ಜಯಂತಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಬಸವ ಜಯಂತಿ ಹಾಗೂ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ಮೇ 10 ರಂದು ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ನಾಗರಾಜ ಅವರು ತಿಳಿಸಿದ್ದಾರೆ.

ಮೇ 10 ರಂದು ಬಸವೇಶ್ವರ ಜಯಂತಿ ಅಂಗವಾಗಿ ಬೆಳಿಗ್ಗೆ 09 ಗಂಟೆಗೆ ನಗರದ ಹೆಚ್.ಆರ್.ಗವಿಯಪ್ಪ ವೃತ್ತ(ಮೋತಿ ವೃತ್ತ)ದ ಬಳಿಯಿರುವ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು.

ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯ ಅಂಗವಾಗಿ ಮೇ 10 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸಾಂಸ್ಕೃತಿಕ ಸಮುಚ್ಛಯ ಆವರಣದ ಹೊಂಗಿರಣ ಸಭಾಂಗಣದಲ್ಲಿ ಪುಷ್ಪಾರ್ಚನೆ ಮಾಡುವುದರ ಮೂಲಕ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ದಾಖಲಾತಿಗೆ ಪ್ರವೇಶ ಪರೀಕ್ಷೆ

**ಮೊದಲ ಪುಟದಿಂದ**

ಕೊಳಗಲ್ಲಿನ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಯ (ಸಿ.ಬಿ.ಎಸ್.ಸಿ) ಪ್ರಾಂಶುಪಾಲರ ಮೊ:7353346069, ಸಂಡೂರಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ: 9480933730, ಕಂಪ್ಲಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ: 9113280239 ಇವರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಂಗಾರಗೊಂಡ ಮತಗಟ್ಟೆ ಕೇಂದ್ರಗಳು

## ಬಳ್ಳಾರಿ ಜಿಲ್ಲೆಯಾದ್ಯಂತ 50 ವಿಶೇಷ ಮತಗಟ್ಟೆಗಳ ಸ್ಥಾಪನೆ

**ಹಂಪಿ ಟೈಮ್ಸ್ ಬಳ್ಳಾರಿ**

09–ಬಳ್ಳಾರಿ (ಪ.ಪಂ) ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಇದೇ ಮೇ 07 ರಂದು ಮಂಗಳವಾರ ಮತದಾನ ನಡೆಯಲಿದೆ. ಈ ಹಿನ್ನಲೆಯಲ್ಲಿ ಮತದಾನ ಪ್ರಮಾಣ ಹೆಚ್ಚಿಸಲು, ಮತದಾರರನ್ನು ಆಕರ್ಷಿಸಲು ಜಿಲ್ಲೆಯಾದ್ಯಂತ 50 ವಿಶೇಷ ಮತಗಟ್ಟೆ ಕೇಂದ್ರಗಳನ್ನು ವಿವಿಧ ಮಾದರಿಗಳಲ್ಲಿ ಸಿಂಗಾರಗೊಳಿಸಿದ್ದು, ಅಲಂಕೃತ ಮತಗಟ್ಟೆಗಳು ಮತದಾರರನ್ನು ಕೈ ಬೀಸಿ ಕರೆಯುತ್ತಿವೆ.

ಪ್ರಜಾಪ್ರಭುತ್ವದ ಹಬ್ಬ ಮತದಾನಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಜಿಲ್ಲೆಯಲ್ಲಿ ವಿಶೇಷ ವಿನ್ಯಾಸದಲ್ಲಿ ಸಖಿ ಮತಗಟ್ಟೆ, ವಿಶೇಷ ಚೇತನರ ಮಾದರಿ ಮತಗಟ್ಟೆ, ಯುವ ಮತಗಟ್ಟೆ, ಸಾಂಪ್ರದಾಯಿಕ ಮತಗಟ್ಟೆ ಹಾಗೂ ವಿಷಯಾಧಾರಿತ (ಥೀಮ್) ಮತಗಟ್ಟೆಗಳು ಸಿಂಗಾರಗೊಂಡು ಕಂಗೊಳಿಸುತ್ತಿವೆ.

ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಮತದಾರರನ್ನು ಆಕರ್ಷಿಸುವ ನಿಟ್ಟಿನಲ್ಲಿ 50 ವಿಶೇಷ ಮತಗಟ್ಟೆಗಳನ್ನು ಸ್ಥಾಪನೆ ಮಾಡಲಾಗಿದೆ. ಮಹಿಳಾ ಮತದಾರರನ್ನು ಉತ್ತೇಜಿಸಲು ಪ್ರತಿ ವಿಧಾನಸಭಾ ಕ್ಷೇತ್ರವಾರು, ಮಹಿಳಾ ಮತದಾರರು ಹೆಚ್ಚಿರುವ ಕಡೆ 5 ಸಖಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಈ ಮತಗಟ್ಟೆಗಳಲ್ಲಿ ಬಹುತೇಕ ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಚುನಾವಣಾ ಕಾರ್ಯ ನಿರ್ವಹಿಸುವರು. ಇದೇ ಮಾದರಿಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 1 ರಂತೆ ವಿಶೇಷ ಚೇತನರ ಮತಗಟ್ಟೆ, ಯುವ ಮತಗಟ್ಟೆ, ವಿಷಯಾಧಾರಿತ (ಸ್ಥಳೀಯ ಇತಿಹಾಸ, ಪರಂಪರೆ, ಸಂಸ್ಕೃತಿ ಬಿಂಬಿಸುವ) ಮತಗಟ್ಟೆ ಹಾಗೂ 2 ರಂತೆ ಸಾಂಪ್ರದಾಯಿಕ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.



### ಸಿಂಗಾರಗೊಂಡ ಸಖಿ ಮತಗಟ್ಟೆಗಳು:

ಮಹಿಳಾ ಮತದಾರರಿಗಾಗಿ ತೆರೆಯಲಾಗಿರುವ ಸಖಿ ಮತಗಟ್ಟೆಗಳು ತಳಿರು–ತೋರಣ, ರಂಗೋಲಿ, ಹೂ–ಗಿಡ ಅಲಂಕಾರದೊಂದಿಗೆ ಸಿಂಗಾರಗೊಳ್ಳಲಿವೆ.

ಕಂಪ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಂಪ್ಲಿ ಪಟ್ಟಣದ ಶಾಮಿಯಾಚಂದ್ ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಉತ್ತರ ವಲಯ), ಕುರುಗೋಡು ಪಟ್ಟಣದ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ(ಕುರುಬರ ಓಣಿ) ಮತ್ತು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ.

ಸಿರುಗುಪ್ಪ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಿರುಗುಪ್ಪ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ರಾಜೀವ್‌ಗಾಂಧಿ ನಗರ) ಪಶ್ಚಿಮ ವಲಯ, ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ರಾರಾವಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತೆಕ್ಕಲಕೋಟೆಯ ವಾರ್ಡ್ ನಂ.12ರ ಅಂಗನವಾಡಿ ಕೇಂದ್ರ ಮತ್ತು ಹಳೇಕೋಟೆಯ ಸರ್ಕಾರಿ ಹಿ. ಪ್ರಾಥಮಿಕ ಶಾಲೆ.

ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೆಣಕಲ್ಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿರಿವಾರ ಗ್ರಾಮದ ಸರ್ಕಾರಿ ಪ್ರೌಢಶಾಲೆ, ಬಳ್ಳಾರಿಯ ಕೌಲ್‌ಬಜಾರ್‌ನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ (ರೇಡಿಯೋ ಪಾರ್ಕ್), ಕೋಟೆ ಪ್ರದೇಶದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಹೊಸದು) ಮತ್ತು ಸಂಗನಕಲ್ಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ.

ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಳ್ಳಾರಿ ನಗರದ ತಾಳೂರು ರಸ್ತೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಟೇಲ್ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಪ್ಪಗಲ್ಲು ರಸ್ತೆಯ ಶೆಟ್ರು ಗುರುಶಾಂತಪ್ಪ ಪದವಿ ಪೂರ್ವ ಕಾಲೇಜು ಮತ್ತು ರಾಘವೇಂದ್ರ ಕಾಲೋನಿಯ ನಂದಿ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ & ಸೈನ್ಸ್ ಕಾಲೇಜು ಮತ್ತು ಆರ್‌ಟಿಜಿ ಪ್ರೌಢಶಾಲೆ.

ಸಂಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಂಡೂರು ಪಟ್ಟಣದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಕೃಷ್ಣ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ರಣಜಿತ್‌ಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕುಡುತಿನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮತ್ತು ತೋರಣಗಲ್ಲು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸಖಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

### ವಿಶೇಷಚೇತನರ ಮಾದರಿ ಮತಗಟ್ಟೆ:

ವಿಶೇಷಚೇತರನಮತದಾನವನ್ನುಪ್ರೋತ್ಸಾಯಿಸುವ ಸಲುವಾಗಿ ವಿಕಲಚೇತನರ ಮಾದರಿ ಮತಗಟ್ಟೆ ಸ್ಥಾಪಿಸಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರವಾರು ತಲಾ 1 ವಿಶೇಷ ಚೇತನರ ಮಾದರಿ ಮತಗಟ್ಟೆ ಸ್ಥಾಪಿಸಲಾಗಿದ್ದು, ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 5 ವಿಶೇಷಚೇತನರ ಮಾದರಿ ಮತಗಟ್ಟೆ ಸ್ಥಾಪಿಸಲಾಗಿದೆ.

ಕಂಪ್ಲಿ ಕ್ಷೇತ್ರದ ಎಮ್ಮಿಗನೂರು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸಿರುಗುಪ್ಪ ಕ್ಷೇತ್ರದ ಸಿರುಗುಪ್ಪ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆಶ್ರಯ ಕಾಲೋನಿ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕೌಲ್‌ಬಜಾರ್‌ನ ಸರ್ಕಾರಿ ಉರ್ದು ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ, ಬಳ್ಳಾರಿ ನಗರ ಕ್ಷೇತ್ರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು(ಅಂಚೆ ಕಚೇರಿ ಹತ್ತಿರ) ಮತ್ತು ಸಂಡೂರು ಕ್ಷೇತ್ರದ ಸಂಡೂರು ಪಟ್ಟಣದ ಪುರಸಭೆ ಕಚೇರಿಯಲ್ಲಿ ವಿಶೇಷ ಚೇತನರ ಮಾದರಿ ಮತಗಟ್ಟೆ ಸ್ಥಾಪಿಸಲಾಗಿದೆ.

### ಯುವ ಮತಗಟ್ಟೆ:

ಪ್ರತಿ ವಿಧಾನಸಭಾ ಕ್ಷೇತ್ರವಾರು ತಲಾ 5 ಯುವ ಜನರ ಮತಗಟ್ಟೆ ಸ್ಥಾಪಿಸಲಾಗಿದ್ದು, ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 5 ಯುವ ಮತಗಟ್ಟೆ ಸ್ಥಾಪಿಸಲಾಗಿದೆ.

ಕಂಪ್ಲಿ ಕ್ಷೇತ್ರದ ಸೋಮಲಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿರುಗುಪ್ಪ ಕ್ಷೇತ್ರದ ತೆಕ್ಕಲಕೋಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಬಾಲಕರ), ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕೊಳಗಲ್ಲು ಗ್ರಾಮಪಂಚಾಯತ್ ಕಚೇರಿ, ಬಳ್ಳಾರಿ ನಗರ ಕ್ಷೇತ್ರದ ಬಳ್ಳಾರಿಯ ಎಸ್.ಎನ್.ಪೇಟೆಯ ಎಸ್‌ಎಸ್‌ಎ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸಂಡೂರು ಕ್ಷೇತ್ರದ ಸಂಡೂರು ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಯುವ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

### ಸಾಂಪ್ರದಾಯಿಕ (ಎಥ್ನಿಕ್) ಮತಗಟ್ಟೆ:

ಸ್ಥಳೀಯ ಇತಿಹಾಸ, ಪರಂಪರೆ, ಸಂಸ್ಕೃತಿ ಬಿಂಬಿಸುವ ಸಾಂಪ್ರದಾಯಿಕ (ಎಥ್ನಿಕ್) ಮತಗಟ್ಟೆಗಳನ್ನು ಪ್ರತಿ ವಿಧಾನಸಭಾ ಕ್ಷೇತ್ರವಾರು ತಲಾ 2 ಎಥ್ನಿಕ್ ಮತಗಟ್ಟೆ ಸ್ಥಾಪಿಸಲಾಗಿದ್ದು, ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 10 ಎಥ್ನಿಕ್ ಮತಗಟ್ಟೆ ಸ್ಥಾಪಿಸಲಾಗಿದೆ.

ಕಂಪ್ಲಿ ಕ್ಷೇತ್ರದ ಅರಳಿಹಾಳ್ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಸೋಮಸಮುದ್ರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಹೊಸದು), ಸಿರುಗುಪ್ಪ ಕ್ಷೇತ್ರದ ಸಿರುಗುಪ್ಪ ಪಟ್ಟಣದ ನಗರಸಭೆ ಕಚೇರಿ, ತೆಕ್ಕಲಕೋಟೆಯ ಸರ್ಕಾರಿ ಪ್ರಾಥಮಿಕ ಶಾಲೆ (ಸಿಂಧುಳ್ಳಿ ಕಾಲೋನಿ), ಬಳ್ಳಾರಿ ಗ್ರಾಮೀಣ ಕ್ಷೇತ್ರದ ಹೊನ್ನಳ್ಳಿ ತಾಂಡಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೋಕಾದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಬಳ್ಳಾರಿ ನಗರ ಕ್ಷೇತ್ರದ ಬಳ್ಳಾರಿಯ ಹವಂಭಾವಿಯ ಶ್ರೀ ಚೈತನ್ಯ ಬಾಲಕಿಯ ಪದವಿ ಪೂರ್ವ ಕಾಲೇಜು, ಇನ್‌ಫ್ಯಾಂಟರಿ ರಸ್ತೆಯ ವಾಸವಿ ಇಂಗ್ಲೀಷ್ ಮಾಧ್ಯಮ ಶಾಲೆ ಮತ್ತು ಸಂಡೂರು ಕ್ಷೇತ್ರದ ಬಸಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುಡುತಿನಿಯ ಅಂಗನವಾಡಿ ಕೇಂದ್ರ(ಜಕ್ಕೇರ್ ಬಾವಿ)ದಲ್ಲಿ ಎಥ್ನಿಕ್ ಮತಗಟ್ಟೆ ಸ್ಥಾಪಿಸಲಾಗಿದೆ.

### ವಿಷಯಾಧಾರಿತ (ಥೀಮ್) ಮತಗಟ್ಟೆ:

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 1 ರಂತೆ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 5 ವಿಷಯಾಧಾರಿತ (ಥೀಮ್) ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಕಂಪ್ಲಿ ಕ್ಷೇತ್ರದ ದಮ್ಮೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಸಿರುಗುಪ್ಪ ಕ್ಷೇತ್ರದ ಕೆಂಚನಗುಡ್ಡ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕೌಲ್‌ಬಜಾರ್‌ನ ಮೊಹಮ್ಮದೀಯ ಇಂಗ್ಲೀಷ್ ಮಾಧ್ಯಮ ಶಾಲೆ, ಬಳ್ಳಾರಿ ನಗರ ಕ್ಷೇತ್ರದ ಬಳ್ಳಾರಿಯ ಬಸವೇಶ್ವರ ನಗರದ ವುಂಕಿ ಮರಿಸಿದ್ದಮ್ಮ ಇಂಗ್ಲೀಷ್ ಮಾಧ್ಯಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಮತ್ತು ಸಂಡೂರು ಕ್ಷೇತ್ರದ ಸುಶೀಲಾನಗರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಷಯಾಧಾರಿತ (ಥೀಮ್) ಮತಗಟ್ಟೆ ಸ್ಥಾಪಿಸಲಾಗಿದೆ.

ಬೇಸಿಗೆ ಹಿನ್ನಲೆಯಲ್ಲಿ ಮತದಾನಕ್ಕೆ ಬರುವ ಮತದಾರರಿಗೆ ನೆರಳಿನ ವ್ಯವಸ್ಥೆ ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನೂ ಕಲ್ಪಿಸಲಾಗಿದೆ. ಜಿಲ್ಲೆಯಲ್ಲಿ ಶೇಕಡವಾರು ಮತದಾನ ಪ್ರಮಾಣ ಹೆಚ್ಚಿಸಲು ಮತ್ತು ಮತದಾರರನ್ನು ವಿಶೇಷವಾಗಿ ಆಕರ್ಷಿಸಲು ಜಿಲ್ಲಾಡಳಿತ ಮತ್ತು ಜಿಲ್ಲಾ ಸ್ವೀಪ್ ಸಮಿತಿಯು ವಿಶೇಷ ವ್ಯವಸ್ಥೆ ಮಾಡಲಾಗಿದೆ. ಪ್ರತಿಯೊಬ್ಬ ಮತದಾರರು ಮೇ 7 ರಂದು ತಪ್ಪದೇ ಮತದಾನ ಮಾಡಬೇಕು ಎಂದು ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆಗಿರುವ ಜಿಲ್ಲಾ ಪಂಚಾಯತ್ ಸಿಇಒ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಕೋರಿದ್ದಾರೆ.

## ಪದವೀಧರರ ಕ್ಷೇತ್ರ ಚುನಾವಣೆ ದೂರು ಮೇಲ್ವಿಚಾರಣಾ ಕೋಶ 24/7 ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**

2024ರ ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರ ಚುನಾವಣೆ ಸಮೀಪಿಸುತ್ತಿರುವ ಹಿನ್ನಲೆಯಲ್ಲಿ ಈ ಚುನಾವಣೆಯ ಮಾದರಿ ನೀತಿ ಸಂಹಿತೆ ಹಾಗೂ ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ ಅಂತವರ ವಿರುದ್ಧ ಲಿಖಿತವಾಗಿ ಅಥವಾ ದೂರವಾಣಿ ಮೂಲಕ ಸಾರ್ವಜನಿಕರು ದೂರುಗಳನ್ನು ದೂರವಾಣಿ ಸಂಖ್ಯೆ 08472–200255 ದೂರವಾಣಿ ಸಂಖ್ಯೆಗೆ ತಮ್ಮ ದೂರನ್ನು ಸಲ್ಲಿಸಬಹುದು. ಲಿಖಿತ ದೂರುಗಳನ್ನು ಚುನಾವಣಾಧಿಕಾರಿಗಳು, ಮೇಲ್ವಿಚಾರಣಾ ಕೋಶ, ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರ ಹಾಗೂ ಪ್ರಾದೇಶಿಕ ಆಯುಕ್ತರ ಕಾರ್ಯಾಲಯ ಕಲಬುರಗಿ ವಿಭಾಗ ಕಲಬುರಗಿ ಇವರಿಗೆ ಸಲ್ಲಿಸಬಹುದು. ಈ ದೂರು ನಿರ್ವಹಣಾ ಕೋಶವು ದಿನದ 24 ಗಂಟೆ ಕಾರ್ಯನಿರ್ವಹಿಸಲಾಗುತ್ತದೆ ಎಂದು ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರದ ಚುನಾವಣಾಧಿಕಾರಿಗಳು ಆಗಿರುವ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**AFFIDAVIT**

I, **Jangam Reghu S/o Jangam Siddesh,** aged 41 years, R/o 218/a Lingeswar Nagar Sai Nagar Tirupathi(rural) Chittur Andhra Pradesh-517507

My name is in Adhaar Card as **JANGAM RAGHU** and in Bank Account my name is as **RAGHU.** The above Both Names are same and belongs to me only. vide affidavit dated 03-05-2024 before Notary Surabhi Durga at Hosapete-583201

**AFFIDAVIT**

I, **NEETU HIREMATH** Age 37 years, W/o Kotresh TambralliMath R/o 29th Ward, M.J.Nagar, 2nd Cross, Hospet, Bellary, Karnataka.
My Correct name is **NEETU HIREMATH** and in my education records mentioned as **NEETU H.,** in Passport **NEETU TAMBRALLIMATH,** in Driving licence **H. NEETU.** The above all Names are same and belongs to me only. vide affidavit dated 16-09-2023 before Notary Y.R Chandrasekar at Bangalore-560032

### ವಿಜ್ಞಾನ

## ಗಡಸು ನೀರಿನಲ್ಲಿ ಸೋಪು ಏಕೆ ಹೆಚ್ಚು ನೊರೆ ಕೊಡುವುದಿಲ್ಲ?

**ಆರ್.ಬಿ.ಗುರುಬಸವರಾಜ**

ಈ ಹಾಳಾದ ನೀರಿನಲ್ಲಿ ಎಷ್ಟೇ ಸೋಪು ಹಚ್ಚಿ ಉಜ್ಜಿದರೂ ನೊರೆಬರುವುದಿಲ್ಲ. ಉಜ್ಜಿ ಉಜ್ಜಿ ಕೈಗಳೆಲ್ಲಾ ಬಿದ್ದುಹೋದವು. ಯಾವಾಗ ಮುನ್ಸಿಪಾಲಿಟಿಯವರು ಬದಲಿ ನೀರು ಬಿಡವರೋ ಎಂಬಂತಾಗಿದೆ. ಈ ನೀರಿನಲ್ಲಿ ಉಜ್ಜಿ ಉಜ್ಜಿ ಬಟ್ಟೆ ಹರಿಯುತ್ತವೆಯೇ ವಿನಹ, ನೊರೆ ಮಾತ್ರ ಬರುವುದೇ ಇಲ್ಲ'. ಪ್ರತಿ ದಿನವೂ ಬಟ್ಟೆ ತೊಳೆಯುವಾಗ ಅಮ್ಮನಿಂದ ಈ ಡೈಲಾಗ್ ಕೇಳಿ ಕೇಳಿ ಸಾಕಾಗಿದ್ದ ಮನೋಜ್. ಏನಾದರೂ ಮಾಡಿ ಈ ನೀರಿನಲ್ಲೂ ನೊರೆ ಬರುವಂತೆ ಮಾಡಲು ಸಾಧ್ಯವಿಲ್ಲವಾ ಎಂದು ಆಲೋಚಿಸತೊಡಗಿದ. ಮರುದಿನ ಶಾಲೆಯಲ್ಲಿ ಶಿಕ್ಷಕರೊಂದಿಗೆ ಈ ವಿಷಯ ಚರ್ಚಿಸಿದ. "ಸರ್, ಗಡಸು ನೀರಿನಲ್ಲಿ ಸೋಪು ಏಕೆ ಹೆಚ್ಚು ನೊರೆ ಕೊಡುವುದಿಲ್ಲ?" ಎಂದ. ಅದಕ್ಕೆ ಶಿಕ್ಷಕರ ಉತ್ತರ ಹೀಗಿದೆ.



ಗಡಸು ನೀರಿನಲ್ಲಿ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಮ್ ಅಯಾನ್‌ನಂತಹ ಹೆಚ್ಚಿನ ಪ್ರಮಾಣದ ಕರಗಿದ ಖನಿಜಗಳಿವೆ. ಈ ಖನಿಜಗಳು ಸೋಪ್ ಅಣುಗಳೊಂದಿಗೆ ಪ್ರತಿಕ್ರಿಯಿಸುತ್ತವೆ ಮತ್ತು ಸೋಪ್ ಸ್ಕಮ್ ಎಂದು ಕರೆಯಲ್ಪಡುವ ಕರಗದ ಸಂಯುಕ್ತಗಳನ್ನು ರೂಪಿಸುತ್ತವೆ. ಇದು ಸೋಪಿನ ನೊರೆ ಉಂಟು ಮಾಡುವ ಸಾಮರ್ಥ್ಯವನ್ನು ಅಡ್ಡಿಪಡಿಸುತ್ತದೆ.

ಸೋಪ್‌ನ ಅಣುಗಳು ಹೈಡ್ರೋಫಿಲಿಕ್ ಮತ್ತು ಹೈಡ್ರೋಫೋಬಿಕ್ ಎಂಬ ಎರಡು ವಿಭಿನ್ನ ತುದಿಗಳನ್ನು ಹೊಂದಿರುವ ಅಣುಗಳಿಂದ ಮಾಡಲ್ಪಟ್ಟಿದೆ. ಹೈಡ್ರೋಫಿಲಿಕ್ ಎಂಬುದು ನೀರನ್ನು ಆಕರ್ಷಿಸುವ ತುದಿ, ಹೈಡ್ರೋಫೋಬಿಕ್ ಎಂಬುದು ನೀರನ್ನು ಅಪಕರ್ಷಿಸುವ ತುದಿ. ನೀರಿನಲ್ಲಿ ಕರಗಿದ ಖನಿಜಗಳ ಆಧಾರದ ಮೇಲೆ ಸೋಪ್‌ನ ಅಣುಗಳು ಪ್ರತಿಕ್ರಿಯೆ ತೋರುತ್ತವೆ. ನೀರಿನಲ್ಲಿ ಕ್ಯಾಲ್ಸಿಯಂ ಮತ್ತು ಮೆಗ್ನೀಷಿಯಂ ಖನಿಜಗಳು ಕರಗಿದ್ದರೆ ಸೋಪ್‌ನ ಹೈಡ್ರೋಫೋಬಿಕ್ ಅಣುಗಳು ನೀರನ್ನು ಅಪಕರ್ಷಿಸುತ್ತವೆ. ನೀರಿನಲ್ಲಿ ನೊರೆ ಉಂಟು ಮಾಡಲು ಅವಕಾಶ ನೀಡುವುದಿಲ್ಲ. ಬದಲಾಗಿ ಬಿಳಿ ದ್ರವವನ್ನು ಉಂಟುಮಾಡುತ್ತವೆ.

ಈ ಸಮಸ್ಯೆಯನ್ನು ತಪ್ಪಿಸಲು, ಸೋಪ್ ಬದಲಿಗೆ ಸಿಂಥೆಟಿಕ್ ಡಿಟರ್ಜೆಂಟ್‌ಗನ್ನು ಬಳಸಬಹುದು. ಸಂಶ್ಲೇಷಿತ ಮಾರ್ಜಕಗಳು ಗಡಸು ನೀರಿನ ಖನಿಜಗಳೊಂದಿಗೆ ಪ್ರತಿಕ್ರಿಯಿಸುವುದಿಲ್ಲ ಮತ್ತು ಗಡಸು ನೀರಿನಲ್ಲಿಯೂ ಸಹ ನೊರೆಯನ್ನು ಉಂಟು ಮಾಡುತ್ತವೆ. ಅಲ್ಲದೇ ನೀರಿನಿಂದ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಮ್ ಅಯಾನುಗಳನ್ನು ತೆಗೆದುಹಾಕಲು ನೀರಿನ ಮೃದುಕಾರಕಗಳನ್ನು ಬಳಸಬಹುದು. ಮೃದುಕಾರಕಗಳು ಗಡಸು ನೀರಿನಲ್ಲೂ ಸೋಪು ನೊರೆಯಾಗುವಂತೆ ಮಾಡುತ್ತವೆ.

## ಮೇ 6, 7 ಬಸ್ ಸಂಚಾರದಲ್ಲಿ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**

ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ನಿಮಿತ್ತ ಚುನಾವಣಾ ಕಾರ್ಯಕ್ಕೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಗೆ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಹೊಸಪೇಟೆ ವಿಭಾಗದಿಂದ ಕರಾರು ಒಪ್ಪಂದದ ಮೇಲೆ 208 ವಾಹನಗಳನ್ನು ಒದಗಿಸಲಾಗಿರುವುದರಿಂದ ಜಿಲ್ಲೆಯ ವಿವಿಧೆಡೆ ಬಸ್ ಸಂಚಾರದಲ್ಲಿ ಮೇ 6 ಹಾಗೂ ಮೇ 7ರಂದು ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಹಾಗೂ ಹರಪನಹಳ್ಳಿ ತಾಲೂಕುಗಳಿಂದ ವಿವಿಧ ಸ್ಥಳಗಳಿಗೆ ತೆರಳುವ ಬಸ್‌ಗಳ ದೈನಂದಿನ ಕಾರ್ಯಚರಣೆಯಲ್ಲಿ ವ್ಯತ್ಯಯವಾಗಲಿರುವ ಕಾರಣ ಪ್ರಯಾಣಿಕರು ಸಹಕರಿಸಲು ಕೋರಲಾಗಿದೆ ಎಂದು ಹೊಸಪೇಟೆ ವಿಭಾಗದ ಕಕರಸಾ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA